ಹರಾವಳಿಗಾನ

ಶ್ರೀಃ

ತಿಲಕಕಾವ್ಯಾಂಜಲಿ



ಲೋಕಮಾನ್ಯ ತಿಲಕಮಹಾರಾಜರು.

ಪ್ರಕಾಶಕ:

ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ.

ಬೆಲೆ ೦-೪-೦.

ತಿಲಕಸಂದೇಶ

ಸಂಪಾದಕ:

ಡಿ. ಕೆ. ಭಾರದ್ವಾಜ, ವಿದ್ಯಾಭೂಷಣ.

ಇದೀ ಕನ್ನಡ ನಾಡಿನಲ್ಲಿ ಧಾರ್ಮಿಕ ಮತ್ತು ವಿದ್ಯಾವಿಷಯಕವಾ ಚಿತ್ರಗಳಿಂದೊಡಗೂಡಿರುವ ಶ್ರೇಷ್ಠವಾದ ಮಾಸಪತ್ರಿಕೆಯು ಇದೊಂ ಇದಕ್ಕೆ ಸಮಾನವಾದ್ದು ಮತ್ತೊಂದು ಇಲ್ಲವೆಂದು ಕರ್ನಾಟಕಮಿತ್ರ ಸ್ವದ ಶಾಭಿಮಾನಿ, ಶುಭೋದಯ, ಕಾನಡಾಧುರೀಣ, ಸದ್ಬೋಧ ಚಂದ್ರಿ ವಾಗ್ಭೂಷಣ, ಸಹಕಾರಿ ಭಕ್ತಬಂಧು ಇತ್ಯಾದಿ ಪತ್ರಕರ್ತರೂ, ವಿದ್ವಾಂಸರು ಉತ್ತಮ ಅಭಿಪ್ರಾಯವನ್ನು ಕೊಟ್ಟಿರುವರು. ಇದು ಪ್ರತಿ ತಿಂಗಳ ೨೫ನೆಯ ತಾರೀಖಿಗೆ ತಪ್ಪದೆ ಹೊರಡುವುದು. ಪ್ರತಿ ತಿಂಗಳಲ್ಲಿಯೂ ಒಬ್ಬ ಸಾಧು ಸಂತರ ಅಥವಾ ದೇಶಭಕ್ತರ ಜೀವನ ಚರಿತ್ರೆಯು ಚಿತ್ರ ಸಹಿತವಾಗಿ ಪ್ರಕಟ ವಾಗುವುದು. ಮತ್ತೆ ಹಿಂದೂಜನರ ಹಬ್ಬಗಳ ಚರಿತ್ರೆ, ವೇದಾಂತವಿಷಯ ಯಾತ್ರಾಸ್ಥಳಗಳ ವರ್ಣನೆ, ರಾಜತಂತ್ರ, ಅಸಹಕಾರ ಇವೇ ಮುಂತಾದ ರಸವತ್ತಾದ ವಿಷಯಗಳು ಹುಡುಗರಾದಿಯಾಗಿ ಎಲ್ಲರಿಗೂ ತಿಳಿವಂತ ಸುಲಭ ಶೈಲಿಯಿಂದ ತಿಳಿಗನ್ನಡದಲ್ಲಿ ಪ್ರಕಟವಾಗುವವು. ವರ್ಷಾರಂಭ ಅಗಸ್ಟ (ಶ್ರಾವಣದಿಂದ)ದಿಂದ. ವಾರ್ಷಿಕ ವರ್ಗಣಿ ರೂ. ೩-೦-೦, ಮಾದರಿ ಪತ್ರಿಕೆಯ ಬೆಲೆ ೬ ಆಣೆ. ಒಂದು ವರ್ಷ ಚಂದಾದಾರರಾಗಿ ನೋಡಿರಿ!

ತಿಲಕಸಂದೇಶ ಕಾರ್ಯಾಲಯ,

ಮಂಗಳೂರು, ದ. ಕನ್ನಡ.

~~S. P. Bhat~~

ಹರಿಮಕೇಗಾನಿ



ಪುಂಡೂರು ರಾಮಚಂದ್ರ ಪುಣಿಂಚತ್ತಾಯರು.

S. P. Bhat

ಈ

ಗ್ರಂಥವನ್ನು

ನನ್ನ

ಪೂಜ್ಯ ತೀರ್ಥರೂಪರವರ

ದಿವ್ಯ ಚರಣಾರವಿಂದಗಳಿಗೆ

ಭಕ್ತಿಪೂರ್ವಕವಾಗಿ

ಸಮರ್ಪಿಸಿದ್ದೇನೆ.

ಪ್ರಕಾಶಕ.

S. P. Bhat

ಶ್ರೀ

ತಿಲಕಕಾವ್ಯಾಂಜಲಿ



ಪ್ರಕಾಶಕ:

ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ

ಮಂಗಳೂರು

ಶಾರದಾ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟಿತು.

1921

ಅನುಕ್ರಮಣಿಕೆ.

ಮುನ್ನುಡಿ.

ಶ್ರೀಯುತ ಮ. ರಾ. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು ತಮ್ಮ ಈ ಮುಂದಿನ ಕಾವ್ಯಪುಷ್ಪಾಂಜಲಿಗೆ ಒಂದು ಮುನ್ನುಡಿಯನ್ನು ಬರೆದು ಕೊಡಲು ನನ್ನನ್ನು ಕೇಳಿರುವರು. ಮುಂದಿನ ಕವಿತಾಕುಸುಮಗಳು ಸ್ವಾಭಾವಿಕವಾಗಿಯೆ ತಮ್ಮ ಪರಿಮಳದಿಂದ ಲೋಕವನ್ನು ಸುಗಂಧಿತಗೊಳಿಸುವಲ್ಲಿ ನಮ್ಮ ಮುನ್ನುಡಿಯು ಅಷ್ಟೊಂದು ಅವಶ್ಯವಿಲ್ಲ. ಆದರೂ ನಮ್ಮ ಮಿತ್ರರ ಅಪೇಕ್ಷೆಯನ್ನು ಪೂರಯಿಸುವುದು ಕರ್ತವ್ಯವಾಗಿದೆ.

ಲೋಕಮಾನ್ಯ ಬಾಳಗಂಗಾಧರ ಟಿಳಕರು ಸ್ವರ್ಗಸ್ಥರಾಗಿ ನಾಳೆ ಅಗೋಸ್ತು ತಾರೀಕು ೧ಕ್ಕೆ ಸರಿಯಾಗಿ ಒಂದು ವರ್ಷವಾಗುತ್ತದೆ. ಅಷ್ಟರೊಳಗಾಗಿ ಆ **ಸ್ವರಾಜ್ಯಾತ್ಮ**ರ ಪುಣ್ಯಸ್ಮರಣವು ಎಂದೂ ಲೋಪವಾಗಿ ಹೋಗಲಿಕ್ಕಿಲ್ಲ. ಮಾತ್ರವಲ್ಲ, ಹಿಂದುಸ್ಥಾನಕ್ಕೆ ಸ್ವರಾಜ್ಯವು ಪ್ರಾಪ್ತವಾಗುವತನಕ ಅವರ ಸ್ಮರಣವು ಆಬಾಲವೃದ್ಧರಲ್ಲಿ ಉಳಿದೆ ಉಳಿಯುವುದು. ಸ್ವರಾಜ್ಯ ಪ್ರಾಪ್ತವಾದ ಮೇಲಾದರೂ ಕೂಡಾ ಆ ಮಹಾ **ಸ್ವರಾಜ್ಯಾತ್ಮ**ರ ಹೆಸರು ಹಿಂದುಸ್ಥಾನದ ಸ್ವರಾಜ್ಯೇತಿಹಾಸದಲ್ಲಿ ಚಿರಸ್ಥಾಯಿಯಾಗಿ ನಿಲ್ಲುವುದು. ಈ ನೇರೆಗೆ ಯಾವ ದೃಷ್ಟಿಯಿಂದ ನೋಡಿದರೂ ಲೋಕಮಾನ್ಯರ ಸ್ಮರಣವು ಸಾಕ್ಷರ-ನಿರಕ್ಷರರಲ್ಲಿ ಏಕಪ್ರಕಾರವಾಗಿ ನಿಂತಿದೆ, ನಿಲ್ಲುವುದು ಮತ್ತು ನಿಲ್ಲಲೇಬೇಕು. ಯಾಕೆಂದರೆ, ಅವರು ತಮ್ಮ ಇಡೀ ಆಯುಷ್ಕಾಲವನ್ನು ಹಿಂದುಸ್ಥಾನದ ಪ್ರಗತಿಯಲ್ಲಿ, ಹಿಂದಿ ಸ್ವರಾಜ್ಯದ ಚಳವಳದಲ್ಲಿ ವೆಚ್ಚ ಮಾಡಿದ್ದಾರೆ. ಈ ಮಾತನ್ನು ಇನ್ನೂ ಸರಿಯಾಗಿ ಹೇಳಬೇಕಾದರೆ, ಲೋಕಮಾನ್ಯರು ಹಿಂದಿ ಸ್ವರಾಜ್ಯದ ವಟಬೀಜವನ್ನು ಹಿಂದಿ ಭೂಮಿಯಲ್ಲಿ ಹಾಕಿ ಇಲ್ಲಿಯ ೩೦ ಕೋಟಿ ಅಂತಃಕರಣಗಳಲ್ಲಿ ಅದರ ಪ್ರಚಂಡ ವೃಕ್ಷವು ಬೆಳೆಯುವಂತೆ ಮಾಡಿದ್ದಾರೆ. ಈ ಅಪೂರ್ವ ಸಂಗತಿಯನ್ನು ಯಾವ ಹಿಂದಿ ಗೃಹಸ್ಥನು ಮರೆತಾನು! ಎಂದಮೇಲೆ ಅವರ ಪುಣ್ಯಸ್ಮರಣದ ರಕ್ಷಣಾರ್ಥವಾಗಿ ಒಂದು ವಾಙ್ಮಯವನ್ನು ಪ್ರಕಟಿಸುವುದು ಅವಶ್ಯವಿಲ್ಲವೆಂದು ಒಂದುವೇಳೆ ಕೆಲವರು ನೆನಸಿಕೊಂಡಿರಬಹುದು. ಆದರೆ ಸರ್ವಸಂಪನ್ನನಾದ ದೇವರಿಗೆ ಹಸಿವೆಯಾಗುತ್ತದೆ, ಬಾಯಾರಿಕೆಯಾಗುತ್ತದೆ ಎಂಬುದರಿಂದ ಯಾರಾದರೂ ಅನ್ನದ ನೈವೇದ್ಯ ತೋರಿಸುವುದಿಲ್ಲ, ಇಲ್ಲವೆ ಒಂದು ಕುಡತೆ ಹಾಲನ್ನು ಸಮರ್ಪಿಸುವುದಿಲ್ಲ! ತಮ್ಮ ಭಕ್ತಿಯನ್ನು ವ್ಯಕ್ತಪಡಿಸಲು ಭಕ್ತರಿಗೆ ಅದೊಂದು ಸಂದರ್ಭವು. ಹಾಗೆಯೆ ಆ ಪುಣ್ಯಪ್ರತಾಪಿಯಾದ **ಸ್ವರಾಜ್ಯಾತ್ಮ**ನು ನಮ್ಮ ಜನಾಂಗದ ಮೇಲೆ ಯಾವ ಮಹೋಪಕಾರವನ್ನು ಮಾಡಿಟ್ಟಿರುವನೊ ಅದರ ಬಗ್ಗೆ ಯೋಗ್ಯವಾದ ಕೃತಜ್ಞತೆಯನ್ನು ತೋರ್ಪಡಿಸುವುದು ತಮ್ಮ ಕರ್ತವ್ಯವೆಂದು ತಿಳಿದು

ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿ ಲೋಕಮಾನ್ಯರ ಈ ಪ್ರಥಮ ವಾರ್ಷಿಕ ಶ್ರಾದ್ಧದ ಸಂದರ್ಭದಲ್ಲಿ ಅನೇಕರು ಅವರ ಗುಣಗಳನ್ನು ಕೊಂಡಾಡುತ್ತಿದ್ದಾರೆ. ಇತರ ಭಾಗಗಳಲ್ಲಿ ಇದು ಹೇಗೆ ನಡಕೊಂಡುಂಟೋ ಹಾಗೆಯೆ ನಮ್ಮ ಕರ್ನಾಟಕದಲ್ಲೂ ಶ್ರೀ. ಪಿ. ಲಕ್ಷ್ಮೀನಾರಾಯಣ ಪುಣಿಂಚತ್ತಾಯರು ಈ ಸ್ತುತ್ಯ ಪ್ರಯತ್ನವನ್ನು ಮಾಡಿರುವರು. ಮುಂದಿನ ಕರ್ನಾಟಕ ಪದ್ಯಗಳು ಲೋಕಮಾನ್ಯರ ಉದಾತ್ತ ಗುಣಗಳ ವರ್ಣನದಿಂದ ತುಂಬಿಕೊಂಡಿರುವ ಕಾರಣ ಭಕ್ತಿರಸವು ಅವುಗಳಲ್ಲಿ ಮೂರ್ತವಾಗಿ ನಿಂತುಕೊಂಡಿದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯು ಮಾತಾಗಲಿಕ್ಕಿಲ್ಲ. ಇಂಥ ಕಾವ್ಯಗಳಲ್ಲಿ ಕವಿಗಳ ಕಾವ್ಯ ಚಾತುರ್ಯಕ್ಕಿಂತ ಗತಿಸಿದ ಮಹಾತ್ಮರ ಗುಣಗಳೊಡನೆ ಏಕತಾನತೆಯುಂಟಾಗುವುದು ಮುಖ್ಯ ಉದ್ದೇಶವಾಗಿದೆ. ಮತ್ತು ಆ ಉದ್ದೇಶವು ಮುಂದಿನ ಪುಷ್ಪಗಳಲ್ಲಿ ಸಫಲವಾದುದು ಕಂಡುಬರುತ್ತದೆ.

ಮ. ರಾ. ಪುಣಿಂಚತ್ತಾಯರು ಪರಿಶ್ರಮದಿಂದ ಕನ್ನಡಿಗರ ಮುಂದೆ ತಂದಿರುವ ಈ **"ತಿಳಕಕಾವ್ಯಪುಷ್ಪಾಂಜಲಿ"**ಯು ಸರ್ವರ ಆದರಕ್ಕೆ ಪಾತ್ರವಾಗಿ ಪುನಃ ಇಂಥ ಸ್ವಾಭಿಮಾನಕರ ವಾಙ್ಮಯದಲ್ಲಿ ಹೆಚ್ಚಿನ ಪರಿಶ್ರಮವನ್ನು ತೆಕ್ಕೊಳ್ಳಲು ವಾಚಕರು ಅವರಿಗೆ ಸಂದರ್ಭಗಳನ್ನು ಒದಗಿಸಿಕೊಟ್ಟಾರೆಂದು ಪೂರ್ಣ ನಂಬಿಕೆ ಇದೆ.

ಮಂಗಳೂರ ಕೇ. ಈ. ಎಮ್.
ಹ್ಯಾಸ್ಕೂಲು, ತಾ. ೫-೭-೨೧.

ಆತ್ಮಾರಾಮಶಾಸ್ತ್ರೀ ಓಡ್ಲಮನೆ.

Publisher's Note.

In bringing out this small collection of Song Offerings, the Publisher is actuated by the deep conviction of paying his humble tribute to the memory of the late **Lokamanya Tilak.** It is quite unnecessary to touch on the historical facts of the eventful career of that **Great Super-Man** in as much as every detail of his life has become as it were, household words. Yet the temptation of adding something which is visualized by individual intuition is irresistible.

The Romance of his life impresses us so much that we are inspired to Poetry and Song. Many profound contemporaries of his, may claim our attention; but the greatness of his name and the greatness of his life endows a unique aspect which could not be concieved of in the case of any other. Not so intellectual or profound like Arabindo, nor prophetic or mystic like Mahatma, Tilak was yet the pioneer of the **Grand Cause** which we cherish at present as our only salvation. His contribution to our progress and civilisation is on a par with those of our Puranic Heroes as Sri Rama or Sri Krishna in as much as he has been the chief instrument to give tone and colour to our aspiration and agonies and to devise ways and means for our salvation. What he earnestly hoped in his last moment is truly symbolical of his own life.

"यदा यदाहि धर्मस्य ग्लानिर्भवति भारत ।
अभ्युत्थानमधर्मस्य तदात्मानं सृजाम्यहं ॥"

Very truly does Browning's ideal of a hero find a counterpart in Tilak also. He was also one

"Who never turned his back but marched breast forward.
Who never doubted clouds would break
Though Right were worsted Wrong would triumph.
Held we fall to rise are baffled to fight better, sleep to wake".

In conclusion, my heartfelt thanks are due to Vidyawachaspathi Atmaram Shastry for his Foreword; as well as to Vidyabhushana D. K. Bharuwaja for kindly lending the blocks of Tilak and Satyabhama Devi. Also my sincere thanks to all the learned contributors who were kind enough to write for this volume. The verses going under my name requires all the indulgence of the Reader in his judgment of it as only the immeture performance of a humble devotee of Tilak Maharaj.

Trishileshwar
MANGALORE,
1st August 1921.

P. L. Puninchattaya.

S. P. Bhat
29/9/21

ಶ್ರೀಃ

ತಿಲಕಕಾವ್ಯಾಂಜಲಿ.

॥ ಸ್ವರಾಜ್ಯಾತ್ಮತರ್ಪಣಮ್ ॥

ನಿರ್ಯಾತಸ್ಯ ದಿವಂ ಶರತ್ಸಮಭವದ್ ಯಸ್ಯ ಸ್ವರಾಜ್ಯಾತ್ಮನೋ ।
ಜಾತೋ ಭಾಸ್ಕರ ಸುಪ್ರಭಾತ್ಮಕತಯಾ ಯೋ ದೇವಮಾನ್ಯೋಽಧುನಾ ॥
ನೈಷ್ಕರ್ಮ್ಯಂ ನಿರವರ್ತಯದ್ ಭಗವತಾ ಪ್ರೋಕ್ತಂ ಯ ಆ ಜನ್ಮನಃ ।
ಶ್ರೀ ಬಾಲಂ ತಿಲಕಂ ಸ್ವರಾಜ್ಯ ಹೃದಯಂ ತ್ರಿಸ್ತರ್ಪಯಾಮ್ಯದ್ಯ ತಮ್
॥ ೧ ॥

ಸ್ವಾರ್ಥತ್ಯಾಗಮಹಾಧ್ವರಸ್ಯ ಭರತಕ್ಷೋಣಿಸ್ವರಾಜ್ಯಾಚಲತ್— ।
ಸೌಖ್ಯಪ್ರಾಪ್ತಿಫಲಸ್ಯ ಯೂಪಮಿಹ ಯಃ ಪೂರ್ವಂ ಸಮಾರೋಪಯತ್ ॥
ಕಾರಾವಾಸಫಲಂ ತು ಯಸ್ಯ ಜನತಾಸತ್ತಾಪ್ರಸಾರೋ ಹಿತಃ ।
ಶ್ರೀ ಬಾಲಂ ತಿಲಕಂ ಸ್ವರಾಜ್ಯಹೃದಯಂ ತ್ರಿಸ್ತರ್ಪಯಾಮ್ಯದ್ಯ ತಮ್
॥ ೨ ॥

ಗೀರ್ಣೋ ನೈವ ಕದಾಪಿ ಯೇನ ಗದಿತಃ ಶಬ್ದೋಽಪಿ ಚೈಕಾಕ್ಷರೋ ।
ನ್ಯಸ್ತಂ ನೀತಿಪಥೇ ಕದಾಪಿ ನ "ಪದಂ" ಸಂಚಾಲಿತಂ ಸ್ಥಾನತಃ ॥
ಇತ್ಥಂ "ಧೀರ" ಜನಾಗ್ರಗಣ್ಯಪದವೀಂ ಯಃ ಪುಣ್ಯಭಾಕ್ ಸೇವತೇ ।
ಶ್ರೀ ಬಾಲಂ ತಿಲಕಂ ಸ್ವರಾಜ್ಯಹೃದಯಂ ತ್ರಿಸ್ತರ್ಪಯಾಮ್ಯದ್ಯ ತಮ್
॥ ೩ ॥

"ಚೇತ್ತೋ" ಯಸ್ಯ "ಶರೋಲ" ಮಾಹಿತವತೀ "ವರ್ಚಾಲ್" ಸ್ವರಾಜ್ಯಾರ್ಜನೇ ।
ದೃಷ್ಟ್ವಾ ಭೀಷಣದುರ್ಗತಿಂ ಚ "ಕುಸುಮಾತ್" "ಮೃದ್ವ" ತ್ಮಪ್ರಶಂಸಾಂ ಪರಾಮ್ ॥
ಇತ್ಥಂ ಕವ್ಯವಿತೇನ ದಿವ್ಯವಚಸಾ "ಲೋಕೋತ್ತರೋ" ಯೋऽಭವತ್ ।
ಶ್ರೀ ಬಾಲಂ ತಿಲಕಂ ಸ್ವರಾಜ್ಯಕೃದಯಂ ತ್ರಿಸ್ತರ್ಪಯಾಮ್ಯದ್ಯ ತಮ್ ॥ ೪ ॥

ಯಸ್ಯಾತ್ಮಾ ನಿಜಭೂಸ್ವರಾಜ್ಯಕುಸುಮೇ ವಿದ್ಧೈಕದೃಕ್ ಸರ್ವದಾ ।
ತಸ್ಮಾದ್ವ್ಯಾಪ್ಯುಪಲಬ್ಧಮಿತ್ಯಲಮುಸ್ ವೈಕಲ್ಯಮಾಲಂಬತೇ ।
ಸತ್ತಾ ಲೋಕಗತಾ ಚ ಯಸ್ಯ ಮಹತಃ ಶಾಂತ್ಯರ್ಥ ಮಾವಶ್ಯಕೀ ।
ಶ್ರೀ ಬಾಲಂ ತಿಲಕಂ ಸ್ವರಾಜ್ಯಕೃದಯಂ ತ್ರಿಸ್ತರ್ಪಯಾಮ್ಯದ್ಯ ತಮ್ ॥ ೫ ॥

ಆತ್ಮಾರಾಮಶಾಸ್ತ್ರೀ ಓಡ್ಲಮನೆ.

ಭಾರತೀವಿಲಾಪ.

ಅಯಿಭಾರತವಾಸಿನೋಜನಾಃ । ಕಿಮಿಮಾಂಲೋಕಹತಾಂನಪಶ್ಯಥ ।
ಕಲಿನಾ ಬಲಿನಾವಶೀ ಕೃತಾ । ಪರಿದೂಯೇಽಖಿಲು ಮಂದಭಾಗಿನೀ ॥ ೧ ॥
ವಿಧಿನಾಮಮ ವೈಭವದ್ರುಹಾ । ತಿಲಕೋಽಪ್ಯೇಷ ಬತ ಪ್ರಮಾರ್ಜಿತಃ ।
ಮಮಜೀವಿತ ಮದ್ಯ ನಿಷ್ಫಲಂ । ತ್ಯಜತಾತೇ ನಹಿವಂಚಿತಾಸ್ಮ್ಯಹಂ । ೨ ॥

ಶಾಸ್ತ್ರೀ.

॥ ತಿಲಕರ ಧನ್ಯವಾದ ॥

(ವಾರ್ಧಿಕ್ಯ)

ಶ್ರೀ ಮನೋರಮಣ ನಿನ್ನಂ ಪೊರೆವನಲ್ಲದೆ ಪಿ ।
ತಾಮಹಂ ಪಡದವಂ ಮೃಡನೊಡೆಯನುಳಿದ ಸು ।
ತ್ರಾಮಾದಿ ಸುಮನಸರ್ಕಾಮಿತವನೀವನವ ಬಾಂಧವರ್ತಾವಾಗಿರೇ ॥

ಪ್ರೇಮದಿಂ ಸಕಲಸುಜನರ ವಹಿಸಿ ಸಲಹುವ ಮ |
ಹಾಮಹಿಮಯುತೆ ಲೋಕಮಾತೆ ಭಾರತಿಯೆ ನಿನ |
ೀಮನೋವ್ಯಥೆ ಯಾರ ದೆಸೆಯಿಂದ ಬಂದುದವನೇಸು ಧನ್ಯನೊ
ಧರೆಯೊಳು || ೧ ||

ಬಾಲಕರ್ಪಲವರಾಗುವರಳಿದು ಪೋಗುವ |
ಕಾಲವಶರಾದರವರೇನಾದೊಡಂ ನಿನಗೆ |
ಲೀಲೆಯಲ್ಲದೆ ಬರಿದೆ ಮರುಗುವದು ನಿನ್ನೊಳಿದು ಪೊಸತು
ಪರಿಯೆನಿಸದಿಹುದೆ ||
ಬಾಲಕರೊಳೇಗೈದನವ ನಿನಗೆ ನಿನ್ನಘನ |
ಶೀಲಚಿತ್ತವ ಕರಗಿಸುವ ಲೋಕಮಾನ್ಯ ಸುಗು |
ಣಾಲಯಂ ಬಾಲಗಂಗಾಧರಂ ತಿಳಿಯಲವನೇಸುಧನ್ಯನೊ ಧರೆಯೊಳು
|| ೨ ||

ಸಾರವರಿಯದೆ ನಿತ್ಯ ಕರ್ಮಧರ್ಮಂಗಳಂ |
ದೂರತೊಲಗಿಸಿ ಪರರಸೇವೆಯೊಳ್ಸಂದು ಸಂ |
ಸಾರಿಕರೊಳೆಮ್ಮ ಕರ್ತವ್ಯವೆಂದರಿತು ಪರದೇಶದಾಚಾರಗಳನು ||
ಸಾರಲೆಳಸುತ ತಮ್ಮ ತನುಮನಧನಂಗಳ ವಿ |
ಚಾರದಿಂದವರಿಗರ್ಪಿಸಿ ಶೋಕಿಸುವ ಜನರ |
ಕಾರುಣ್ಯದಿಂ ಪೊರೆದ ಬಾಲಗಂಗಾಧರನದೇಸುಧನ್ಯನೊ ಧರೆಯೊಳು
|| ೩ ||

ದೇಶದೇಶಂಗಳಂ ತೊಳಲಿ ಬಳಲುತ ಸದುಪ |
ದೇಶದಿಂದೆಲ್ಲರೊಳಗೈಕಮತ್ಯವರಚಿಸಿ |
ದೇಶಾಭಿಮಾನವಂ ನೆಲೆಗೊಳಿಸಿ ಸುಜನರಂ ಸಂತೈಸಿ ಸಂತಸದೊಳು ||
ದೇಶಕೋಸುಗ ಬಂಧನದಿಸಿಲುಕಿ ತನ್ನಸುಖ |
ಲೇಶಮಂ ಬಯಸದಾತ್ಮಾರಾಮ ಸಚ್ಚರಿತ |
ಭೂಸುರಾನ್ವಯತಿಲಕ ಬಾಲಗಂಗಾಧರನದೇಸುಧನ್ಯನೊ ಧರೆಯೊಳು
|| ೪ ||

ಬಿಸಿಲರ್ಝಳವಮಂ ತಲೆಯೊಳಾಂತು ತನ್ನಾಶ್ರಿತರ |
ನೆಸೆವ ನೆಳಲಿಂದ ಸಂತಾಪಮಂ ತವಿಸಿ ಮಧು |
ರಸಭರಿತ ಪುಷ್ಪಫಲ ದಾನದಿಂದಾದರಿಪ ಕೋಮಲ ರಸಾಲದಂತೆ ||
ವಿಷಮ ಬಂಧನಗಳಂ ಸಹಿಸಿ ಸರಸೋಕ್ತಿಯಲಿ |
ಬಿಸಜ ಬಾಂಧವನಂತೆ ಲೋಕಮಂ ಬೆಳಗಿಸುವ |
ವಸುಮತೀಸುರ ಸಾರ್ವಭೌಮ ಗಂಗಾಧರನದೇಸುಧನ್ಯನೊ ಧರೆಯೊಳು
|| ೫ ||

ಎತ್ತಪೋದುದು ಲೋಕ ಬೆಳಕು ಮುಂಸ್ವರಿದು ಮುಸು |
ಕುತ್ತಿಹುದು ಕಾರುಗತ್ತಲೆಯೆಂದು ಘೋಳಿಡುವ |
ಮತ್ತಕಾಶಿನಿ ಭಾರತಾಂಗನೆಯ ಘೋರಕರುಣಾರವಂ ಕೇಳಬಂದು ||
ರತ್ನಗಿರಿಯಲಿ ಜನಿಸಿ ಜನನಿಯಂ ಸಂತೈಸಿ |
ಸತ್ವಶುದ್ಧಿಯೊಳಂತರಾತ್ಮನಂ ಸೇರ್ದ ಪುರು |
ಷೋತ್ತಮನಪರಮಾಂಶ ಬಾಲಗಂಗಾಧರನದೇಸುಧನ್ಯನೊ ಧರೆಯೊಳು
|| ೬ ||

ಸ್ವಾರ್ಥವಿಲ್ಲದ ನಡತೆ ಕುಲಧರ್ಮವೆಂದು ಪರ |
ಮಾರ್ಥ ಸಂಭಾಷಣವೆ ಭೂಷಣವಿದೆಂದು ಪುರು |
ಷಾರ್ಥಮಂ ಕೈವಲ್ಯಮೆಂದರಿತು ಭುವನವಿದು ಸಂತತಂ ಸುಖಿಸಲೆಂದು ||
ಪ್ರಾರ್ಥಿಸುವ ಲೋಕಮಾತೆಯ ಮನೋರಥಮಂ ಸ |
ಮರ್ಥಿಸುವ ಧೀರಸುಕುಮಾರನಾಕೃತಿಯಿಂ ಕೃ |
ತಾರ್ಥನೆನಿಸಿದ ದೇವ ಬಾಲಗಂಗಾಧರನದೇಸುಧನ್ಯನೊ ಧರೆಯೊಳು || ೭ ||

ಕರ್ಮಿಗಳ್ ಕಾಣಲಾಪರೆ ಚಿದಾನಂದ ಪರ |
ಬ್ರಹ್ಮಸ್ವರೂಪವಂ ತಾನೆಂದು ತನ್ನ ನಿಜ |
ನಿರ್ಮಲಾತ್ಮಕ ಮೂರ್ತಿಯಂ ತೋರದುತಡಗಿಸುವ ಮಾಯಕದ
ಮಹಿಮಸಿಂಗೆ ||

ಕರ್ಮವಿಲ್ಲವು ಜನನಮರಣಂಗಳಿಲ್ಲ ಸ |
ತ್ಕರ್ಮಮಂ ತನ್ನವರ್ತಿಳಿಯಲೆಂದವತರಿಸಿ |
ಧರ್ಮದಿಂ ಮರೆಯಾದ ಬಾಲಗಂಗಾಧರನದೇಸುಧನ್ಯನೊ ಧರೆಯೊಳು
|| ೮ ||

ಶೋಕವಿನ್ನೇಕೆ ಭಾರತಮಾತೆ ನಿನಗೆ ಪರ |
ಲೋಕದೊಳಗೋರ್ವನಾದಂ ಕುಮಾರಕ ಬಳಿಕ |
ಲೋಕವಿದನಿನ್ನೆಗಂ ಮುನ್ನಿನವನಂತೆ ಸತ್ಯಾಗ್ರಹದ ಸುಯ್ದಾನದಿ ||
ಜೋಕೆಮಿಗೆ ಸಂತೈಸಿ ಸ್ವಾತಂತ್ರ್ಯವೀವ ಜಗ |
ದೇಕವೀರಂ **ಕರಮುಚಂದ ಮೋಹನದಾಸ** |
ನಾಕುಮುದ ಬಾಂಧವನೆ **ಗಾಂಧಿ**ಯೆನೆ ಬೆಳಗುವಂ ಕಾರುಣ್ಯಕಿರಣದಿಂದ
|| ೯ ||

ಮಂಗಲಂ ಬಾಲೇಂದು ಶೇಖರಗೆ ಪುರಹರಗೆ |
ಮಂಗಲಂ ದೈತ್ಯಗಜಕೇಸರಿಗೆ ನರಹರಿಗೆ |
ಮಂಗಲಂ ಹರಸತಿಗೆ ಪಾರ್ವತಿಗೆ ನಿತ್ಯಶುಭಮಂಗಲಂ ಶ್ರೀ ಲಕ್ಷ್ಮಿಗೆ ||
ಮಂಗಲಂ ಲೋಕಮಾತೆಗೆ ಭಾರತಾಂಗನೆಗೆ |
ಮಂಗಲಂ ಲೋಕಮಾನ್ಯಗೆ ತಿಲಕದೇವನಿಗೆ |
ಮಂಗಲಂ ಗಾಂಧಿಗೆ ಮಹಾತ್ಮನಿಗೆ ಬಳಿಕವರ ಸತಿಯರ್ಗೆ ಸಾಧ್ವಿಯರಿಗೆ
|| ೧೦ ||

ಯಂ. ಶ್ರೀಪತಿ ಭಟ್ಟ.

ಶ್ರೀಃ

ಬಾಲಗಂಗಾಧರಸ್ತವ.

(ತಿಲಕ ಚರಿತೆ)

23—7—1856

ಉದಿಸಿ ರವಿವೋಲ್ ರತ್ನಗಿರಿಯಲಿ ।
ಮೊದಲು **ಗಂಗಾಧರಗೆ ಪಾರ್ವತಿ** ।
ಯುದರದಲಿ **ಬಳವಂತ ತಿಲಕ** ಕುಮಾರ ನಾಮದಲಿ ॥
ಕುದಿದು ಕಲ್ಲಿನಹಲ್ಯೆವೋಲಿರ ।
ಗಿದ ಭರತ ಭಾಮಿನಿಯನೆಚ್ಚರಿ ।
ಸಿದನು ಜಗದಭಿರಾಮ **ಸೀತಾರಾಮ**ನಂದದಲಿ ॥ ೧ ॥

ತಿಲಕಸೇನಾನಿ ಪ್ರತಾಪವ ।
ತಳೆದು **ರತ್ನಾಗಿರಿ**ಯೊಳುದಿಸಿದ ।
ಗಳಿಗೆಯಲಿ ಬಲುಬಲವು ಬಂದುದು ಭಾರತೀಯರಿಗೆ ॥
ಬೆಳೆಯು ಗುಣವನು ಮೊಳೆಯು ಲೋಕಕೆ ।
ತಿಳಿಸುವಂದದಿ ಪರಬಲವನಂ ।
1857
ಡಲೆಸಿತು ಮಹಾ ಭಾರತೀಯರಣಂಗೆ ಮರುವರುಷ ॥ ೨ ॥

ನಲಿದು ಬಾಲ್ಯದೆ ರತ್ನಗಿರಿಯಲಿ ।
ಬೆಳಗಿ, ತದ್ಗಿರಿವೆಸರ ಸಾರ್ಥಕ ।
ಗೊಳಿಸಿ, ಜನನೀ ಜನಕರೊಂದಿಗೆ ಪೂನೆಗೈತಂದು ॥
ನೆಲೆಸುತಾಪುರ **ಪುಣ್ಯಪುರ**ವೆಂ ।
ದಿಳೆಯೊಳೆಸವಂತೆಸಗಿ, ವಿದ್ಯೆಯ ।
ಕಲಿತುಕೊಂಡಿರೆ ಕಾಲಗತಿಯನು ಹೇಳಲೇನಕಟಾ ! ॥ ೩ ॥

ಪರಮಸಾಧ್ವೀ ಪಾರ್ವತಿಯು ಸುತ |
ವರನತೊರೆಯುತೆ ಭರತಮಾತೆಯ |
1866
ಸೆರಗಿಗೊಪ್ಪಿಸಿ ಬಯಸಿದಳು ಕೈಲಾಸವಾಸವನು ||
ವರುಷಹತ್ತಾಗಿದ್ದ ತಿಲಕನ |
ಪೊರೆದಳೊಲವಿಂ ಭಾರತಾಂಬಿಕೆ |
ಧರೆಯೊಳಂದಿನಿನಾದ **ಭಾರತಬಾಲತಿಲಕನಿವ** || ೪ ||

ಇತ್ತ ವಿದ್ಯಾಭ್ಯಾಸವನು ನಡೆ |
1871
ಸುತ್ತಿರಲು ವರಿಸಿದನು ತಿಲಕನು |
ಸತ್ಯಭಾಮಾದೇವಿಯನು ಶ್ರೀ ಕೃಷ್ಣನಂದದಲಿ ||
ಮತ್ತೆ ಸದ್ಗೃಹಭಾರವಾಂತಿಹ |
ಪುತ್ರ ತಿಲಕನನೀಕ್ಷಿಸುತ ಕೃತ |
1872
ಕೃತ್ಯ ಗಂಗಾಧರನು ಕೈಲಾಸವನು ಸೇರಿದನು || ೫ ||

1879
ನರತಿಲಕನಿಪ್ಪತ್ತಮೂರನೆ |
ವರುಷದಲಿ ಮುಂಬೈವಖೀಲೀ |
ತರಗತಿಯೊಳುತ್ತೀರ್ಣನಾದನು ಭಾರತೀಸುತನು ||
ಹೊರಟನಾಗಲೆ ತಾನು ಜನಿಸಿದ |
ಭರತಖಂಡೋದ್ಧಾರ ಕಾರ್ಯಾ |
ತುರದೆ ನಿಜತನುಮನಧನಂಗಳ ನೀಡಲನುವಾಗಿ || ೬ ||

1880
ಬಂದು ಪೂನೆಯೊಳೊಂದು **ಸಾಲೆಯ** |
1880
ಮುಂದೆ ತಂದು, **ಕಿತಾಬಖಾನೆಯ** |
1880
ನೊಂದ ತೆರೆದನು **ಆರ್ಯಭೂಷಣಮುದ್ರಣಾಲಯವ** ||

1880
ಮುಂದೆ ಮೆರೆದುವು ಚಿತ್ರಶಾಲೆಯು ।
1884
ದೊಂದು ವಿದ್ಯಾಭ್ಯುದಯಸಂಘವ ।
1885
ದೊಂದು ಫರ್ಗ್ಯೂಸನ್ ಮಹಾವಿದ್ಯಾಲಯಾದಿಗಳು ‖ ೭ ‖

1880
ರಾಷ್ಟ್ರಕೇಸರಿ 'ಕೇಸರಿ' ಮಹಾ ।
ರಾಷ್ಟ್ರಪತ್ರಿಕೆಯೊಡನೆಯೆ ಮಹಾ ।
1880
ರಾಷ್ಟ್ರವೆಂಬಾಂಗ್ಲೇಯಭಾಷಾಪತ್ರಿಕೆಯ ನಡೆಸಿ ‖
ರಾಷ್ಟ್ರಜಾಗ್ರತಿಗೊಳಿಸಿ, ಪರಹೃ ।
ದ್ರಾಷ್ಟ್ರವನು ನಡುಗಿಸುತ, ತಿಲಕನು ।
ರಾಷ್ಟ್ರದೊಳಗಭಿನವಶಿವಾಜಿಯು ನಾಮದಿಂದೆಸೆದ ‖ ೮ ‖

ಬಲದೆ ಕೊಲ್ಲಾಪುರದ ಪ್ರಕರಣ ।
1882
ಬಳೆದು ನೂರೊಂದು ದಿನ ಸಜೆಯಾ ।
ಗಲು ತಿಲಕನನುಭವಿಸಿ, ಕಾಸಿದ ಕಾಂಚನದ ಕಳೆಯು ‖
ತಳೆದು ಶೋಭಿಸಿ, ಹಿಡಿದ ಹಟಗಳ ।
ಸಲಿಸಿ, ನಿಜದೇಶಾಭಿಮಾನವ ।
1897
ಬಳಸಿ ಜರಗಿಸಿದನು ಶಿವಾಜಿಗಣೇಶರುತ್ಸವವ ‖ ೯ ‖

ಗಂಡುಗಲಿಗಳದಾರೊ ಕೋಪದೆ ।
1897
'ರಾಂಡೆ' ಸಾಹೇಬನನು ಕೊಂದುದ ।
ಕಂಡು ಸರಕಾರವು ಕಠೋರಾಗ್ರಹವ ತೋರುತಿರೆ ‖
ಚಂಡತಿಲಕನ ಲೇಖನಕೆ ಖತಿ ।
ಗೊಂಡು ರಾಜದ್ರೋಹವೆನ್ನುತ ।
1897
ಕೊಂಡು ಹೋದರು ವರ್ಷ ವೊಂದೂವರೆಯ ಶಿಕ್ಷೆಯಲಿ ‖ ೧೦ ‖

1892
ಹಿಂದೆ ಸನ್ನುತ'ಮಾರ್ಗಶೀರ್ಷ' ಮ |
ನಂದದಿಂ ರಚಿಸಿರುವ ಸುಕಳಾ |
ಸಿಂಧುತಿಲಕನು 'ಆರ್ಯವಸತಿಸ್ಥಾನ'ವೆಂಬುದನು ||
ಬಂಧನದೆ ಬರೆದುದನು ಕಂಡಾ |
ನಂದಿಸಿದ ಕೆಲರರ್ಥವರ್ಷದ |
ಬಂದಿವಾಸವ ಕಡಿಮೆ ಮಾಡಿಸಿಯುವನ ಬಿಡಿಸಿದರು || ೧೧ ||

ಮನೆಗೆ ಬಂದೊಡನೆಯೆ ಹರಿಃ ಓ |
ಮ್ಮೆನುತ ದೇಶೋದ್ಧಾರಯಜ್ಞದ |
ದನಿಯುಗ್ಗೈದು ಮರಾಠಕೇಸರಿ ಗರ್ಜಿಸುತ್ತಿರಲು ||
ಜನರು ಕೊಂಡಾಡುತ್ತಲಾ ತಿಲ |
ಕನನು ಬಹು ಬಗೆಯಾಗಿ ಹೊಗಳುತ |
ಮನದೊಳಗೆ ದೇವಾಂಶನಿವನೆಂದೆನುತ ಗಣಿಸಿದರು || ೧೨ ||

ರಾಜನಂ ಮೀರಿದನುರಾಗದೆ |
ರಾಜಿಸಿದ ಸುಜ್ಞಾನಸೂರ್ಯನ |
ಪೂಜಿಸಿದರಿವನನಭಿಷಿಕ್ತನೃಪಾಲನೆಂದೆನುತ ||
ರಾಜಮಾನ್ಯತೆ ತಿಲಕಗಿಲ್ಲದೊ |
ಡೀ ಜಗದ್ವಿಖ್ಯಾತಮಹಿಮನು |
ಪೂಜ್ಯನದರಿಂ 'ಲೋಕಮಾನ್ಯ'ನೆನುತ್ತ ಪೊಗಳಿದರು || ೧೩ ||

1897-
ಶಿರವನಡರಿತು ತಾಯ್ಮಹಾರಾ |
1905
ಜರ ವಿಚಾರದ ಕಷ್ಟನಷ್ಟದ |
ಹೊರೆನಿಜಾಶ್ರಿತ ಕುಸುಮಹೃದಯದ ಲೋಕಮಾನ್ಯನನು ||
ಪರರು ಬನ್ನದ ಸಾಣೆ ಗಿಕ್ಕು |
ತ್ತಿರಲು, ವಜ್ರಕಠೋರಹೃದಯದೆ |
ನೆರೆದ ರಿಪುಗಳ ಜಯಿಸಿ ಘನತರತೇಜದಿಂದೆಸೆದ || ೧೪ ||

ಮುಂದತೀವ್ರಗಳೆಂಬ ಪಕ್ಷ ;
ದ್ವಂದ್ವಕಾಯಿತು ಸುರತನಗರದೊ ।
1907
ಳೆಂದು ಜರಗಿದ ರಾಷ್ಟ್ರಸಭೆಯೊಳಗಧಿಕ ಗೊಂದಲವು ॥
ಮುಂದೆ ಹೇಳುವುದೇನು ಮಿತ್ರಿದ ।
ಮಂದ ಪಕ್ಷದ ಬಿರುನುಡಿಯು ಹಿಮ ।
ವೃಂದವನು ಛೇದಿಸುತ ಬೆಳಗಿದನುಗ್ರ ತಿಲಕರವಿ ॥ ೧೫ ॥

ಧೀರ ದಾದಾಭಾಯಿ ನರಕಂ ।
ಾರವನು ರಾಷ್ಟ್ರೀಯಸಭೆಯೊಳ ।
ಗೂರಿರುವ ಹಿಂದೀಸ್ವರಾಜ್ಯದ ವೃಕ್ಷದಂಕುರವ ॥
ವೀರ, ದೇಶೋದ್ಧಾರ, ವಾಗ್ಮಿ ।
ಧೀರ, ಸದ್ಗುಣ ಹಾರ, ನಿತ್ಯೋ ।
ದಾರ ಭಾರತ ಕರ್ಮಯೋಗಿಯು ಬಳೆಸಲೆಳಸಿದನು ॥ ೧೬ ॥

1905—1914
ಆ ಸ್ವದೇಶೀಚಳವಳದೊಳಾ ।
ಕೇಸರಿಯು ತಿಲಕಪ್ರತಾಪವಿ ।
ಶೇಷದಿಂ ಗರ್ಜಿಸಲು 'ವಂದೇ ಮಾತರಂ'ಯೆಂದು ॥
ದೇಶವೇ ಬೊಬ್ಬಿಟ್ಟು ಸ್ವಾತಂ ।
ತ್ರ್ಯಶೆಯಲಿ ಚಳವಳವನೆಬ್ಬಿಸಿ ।
ದಾಸತನಕೆ ತಿಲಾಂಜಲಿಯು ನೀವುದಕೆ ಅನುವಾಯ್ತು ॥ ೧೭ ॥

ತಿಲಕರಾಜದ್ರೋಹಕಾರ್ಯಂ ।
ಗಳನು ಮಾಡಿದನೆಂದವನ ಮಂ ।
1908
ಡಲೆಗೆ ಕಳುಹಿದರಾರುವರ್ಷದ ಶಿಕ್ಷೆಯನು ವಿಧಿಸಿ ॥
ತಿಲಕಸಿಂಹನ ಬರಿದೆ ಬಂಧನ ।
ದೊಳಗೆ ಹಾಕಿದರಯ್ಯೊ! ಗ್ರಹಣವು ।
ತಿಲಕರವಿಗಾಯ್ತೆಂದು ಗೋಳಿಟ್ಟುದು ಜನಸ್ತೋಮ ॥ ೧೮ ॥

ಲೋಕಮಾನ್ಯಸಮಸ್ತಸುಜನಾ ।
ನೀಕವಂದ್ಯನನುಳಿದು ಬಾಳುವು ।
ದೇಕೆ ತಾನೆಂದೆನುತ ಶ್ರೀಮತಿ ಸತ್ಯಭಾಮಾಂಬೆ ॥
ಶೋಕಸಾಗರದಲ್ಲಿ ಮುಳುಗೀ ।
ಲೋಕದಾಸೆಯನುಳಿದು ಕೃಷ್ಣಾ! ।
ನಾಕವನು ಸೇರಿದಳು ಘನಮತಿಸತಿಯುರಂದದಲಿ ॥ ೧೯ ॥

ಭರತಖಂಡವೆ ತಿಲಕನಾಗಿರು ।
ತಿರಲು ತಿಲಕನಿಗಾದ ಶಿಕ್ಷೆಯು ।
ಭರತಖಂಡಕ್ಕಿಂದು ದೊರೆತಂತಾಯಿತಕಟಕಟ ॥
ಪರಿಕಿಸಲು ನಿರ್ದೋಷಿತಿಲಕಗೆ ।
ಸೆರೆಯು ಸರಿಯಲ್ಲೆಂದು ಬಹಳಾ ।
ದರದಿ ಲೋಕವೆ ಕೂಗಿ ಸರಕಾರವನು ದೂಷಿಸಿತು ॥ ೨೦ ॥

1914

ಇತ್ತ ತಿಲಕನನಾರುವರ್ಷದ ।
ಮುತ್ತೆ ಜನರಾರರಿಯುದಂದದಿ ।
ಕತ್ತಲೆಯೊಳಾತನ ನಿಜಾಲಯುದೆಡೆಯೊಳಿಳಿಸಿದರು ॥
ಸತ್ಯಭಾಮಾಕಾಂತನೆಂಬ ।
ಸ್ವರ್ಥನಾಮನುತಿರೆಗೊರೆದನುರು ।
ಚಿತ್ತಪಾವನತಿಲಕ ಘನ ಗೀತಾರಹಸ್ಯವನು ॥ ೨೧ ॥

ಏನನೆಂಬೆನು ತಿಲಕಮಹಿಮೆಯ ।
ದಾನವಾಂತಕ ನರಗೊರೆದ ಗೀ ।
ತಾರ್ಣವದ ನಿಷ್ಕಾಮಕರ್ಮಾಮೃತವ ಸೇವಿಸುತ ॥
ಮಾನವರು ತಂತಮ್ಮ ಕರ್ಮವ ।
ಶೂನ್ಯಮಾಡದೆ ಫಲವ ಗಣಿಸದೆ ।
ದೀನಪಾಲಂಗರ್ಪಿಸುತ್ತೆಸಗುವುದು ಲೇಸೆಂದ ॥ ೨೨ ॥

ಕಡಿದು ಕಬ್ಬಿನ ಕೋಲನಾಲೆಗೆ ।
ಹಿಡಿದು ಹಿಂಡಿದರೇನು ಹಾಲನು ।
ಸುಡುವ ದಾವಾಗ್ನಿಯಲಿ ಕಾಸಿದರೇನು ಲೋಕದಲಿ ॥
ಕಡುರುಚಿಯನೊದಗಿಸದೆ ಬಿಡುವುದೆ ।
ಪೊಡವಿಯೊಳಗೆ ಮಹಾತ್ಮರಿಗೆ ಬೆಂ ।
ಬಿಡದೆ ಬಂಧನವಾದೊಡವರ ಮಹಾತ್ಮೆ ಕುಂದುವುದೆ ॥ ೨೩ ॥

ಭಾರತಾಗ್ರಣಿ, ತಾನು ಕಷ್ಟದ ।
ಭಾರವನು ಹೊತ್ತಿರುವನದರಿಂ ।
ಭಾರತೋನ್ನತಿಯಾಗುವುದು ಸಿದ್ಧಾಂತವೆಂದೆನುತ ॥
ದೂರದಾಂಗ್ಲೇಯರಿಗೆ ದೇಶದ ।
ದೂರನೊರೆಯಲು ಪೋಗಿ ಪಾಪವಿ ।
1914—1918
ದೂರ ಮರಳಿ ಸ್ವರಾಜ್ಯಚಳವಳಗಳನು ಬಳೆಯಿಸಿದ ॥ ೨೪ ॥

ಇಂತು ದೇಶಕ್ಕಾಗಿ ದೇಹವ ।
ನಾಂತು ಸರ್ವಾಂಗದಲಿ ಸುಸ್ವಾ ।
ತಂತ್ರ್ಯರಕ್ತವೆ ಹರಿಯುತಿದ್ದಾ ಲೋಕವಾನಿತನು ॥
ಚಿಂತಿಸುತ್ತೆ ಸ್ವರಾಜ್ಯಭೋಗವ ।
ನಂತಕೀರ್ತಿಯ ಪಡೆದು ಲಕ್ಷ್ಮೀ । 31—7—1920
ಕಾಂತ ನಾರಾಯಣ ಮಹಾತ್ಮಾಂತರ್ಯಗತನಾದ ॥ ೨೫ ॥

ತಿಲಕವಿಯೋಗ.

ಇಳೆಯೊಳರುವತ್ತೈದು ವರ್ಷಂ ।
ಗಳ ತನಕ ಬಾಳುತ್ತೆ ತನುವ ।
1920
ನ್ನುಳಿದೆ ವಿಂಶತಿಶತಕದಾದಿಯ ವರ್ಷವಿಂಶತಿಯು ॥
7
ಕುಲಗಿರಿಗಳನಿತಾಗಿರುವ ತಿಂ ।
ಗಳ ಕಡೆಯ ಶನಿವಾರರಾತ್ರಿಯು ।
12 1
ಬಳಸಿನೊಳಗಾದಿತ್ಯ ಘಂಟೆಯು ಮೇಲೆ ಶಶಿಯಾಗೆ ॥ ೨೬ ॥

ಎಂದು ಧರ್ಮದ ಮಹಿಮೆಯತಿ ಕಳೆ ।
ಗುಂದಿ ಧರೆಯೊಳಧರ್ಮ ಬಳೆವುದೊ ।
ಅಂದು ತಾನೇ ಧರ್ಮಸಂಸ್ಥಾಪನೆಯ ಮಾಡುವೊಡೆ ॥
ಬಂದು ಬಿಡುವೆನು ಯುಗಯುಗದೆ ಧರೆ ।
ಗೆಂದು ಭಗವದ್ವಚನವನು ಮುದ ।
ದಿಂದೊರೆದು ತಿಲಕಾವತಾರವ ತೊರೆದೆ ಭೂತಳದೆ ॥ ೨೭ ॥

ನರನ ಶರಶಯ್ಯೆಯಲಿ ಪವಡಿಸಿ ।
ಧರೆಗೆ ತತ್ವವನೊರೆದ ಸ್ವೇಚ್ಛಾ ।
ಮರಣಿಭಾರತವೀರಗಂಗಾಸುತನು ನಡೆದಂತೆ ॥
ಪರವಚನಶರಶಯ್ಯೆಯಲಿ ಮಲ ।
ಗಿರುತ ರಾಷ್ಟ್ರೋನ್ನತಿಯ ತತ್ವವ ।
ನೊರೆದ ಭಾರತವೀರಗಂಗಾಧರಕುಮಾರಕನೇ ॥ ೨೮ ॥

ಸುರಪನಾಮಂತ್ರಣವ ನೀ ಸ್ವೀ ।
ಕರಿಸಿದೈ ಮುಂಬಾಯಿಯಲಿ ಹ ।
ತ್ತಿರದೆ ಸಾವಿರಗಟ್ಟಳೆಯೊಳಾಬಾಲವೃದ್ಧಕುಲ ॥
ನೆರೆಯೆ ತಿಲಕ ವಿಯೋಗಚಿಂತಾ ।
ಶರಧಿಯಲಿ ಮುಳುಗಿದೆಯೊ ಜಗವೇ ।
ಮರುಗುವಂತಾಯ್ತಖಿಲ ದೇಶದ ಜನರು ಗೋಳಿಡಲು ॥ ೨೯ ॥

ಏನನೆಂಬೆನು ಗೋಜಿಯನು ಬಲು ।
ದಾನಗಳನೆಸಗಿದರು, ಸುರಗಣ ।
ಗಾನಭಜನೆಯನಾದ ದೆಸೆದೆಸೆಗಳಲಿ ಹರಡುತಿರೆ ॥
ಮಾನನಿಧಿ ತವದಿವ್ಯದೇಹವ ।
ಪೂನೆಯುವರಿಚ್ಛಿಸಿದೊಡುಂ ಸು ।
ಮ್ಮಾನದಿಂ ಮುಂಬೈಯವರು ಕೊಡಲಿಲ್ಲ ಬಿಡಲಿಲ್ಲ ॥ ೩೦ ॥

ಹೇಳಿದರು ಪೂನೆಯುವರೊಡನತಿ |
ಗೋಳಿಡುತಲೀ ತಿಲಕ ಪೂನೆಯು |
ಬಾಲನದರಿಂ ದೇಹವನು ಕೊಡಿರೆಂದು ಕೇಳುವಿರಾ ||
ಕೇಳದಿರಿ ಕೇಳುತ್ತಲಿವಗೆ ವಿ |
ಶಾಲವಾಗಿಹ ವಿನುತ ಭಾರತ |
ಬಾಲತಿಲಕಾ ಖ್ಯಾತಿಯನು ದಯುಮಾಡಿ ಕೆಡಿಸದಿರಿ || ೩೧ ||

ಮಾಡಿರುವ ಸೇವೆಗಳಯೋಚಿಸಿ |
ನೋಡಿ ಪೂನೆಯ ಬಾಲನೆಂದೇ |
ಆಡಬೇಡಿರಿ ಭರತಖಂಡದ ಬಾಲತಿಲಕನಿವ ||
ರೂಢಿಸಿದ ಸುತನಿವನ ದೇಶದ |
ರೂಢಿಸಿದ ಮುಂಬಾಯಿಯಲಿ ಕಡು |
ರೂಢಿಸಿದ 'ಚೌಪಾಟಿ'ಯಲಿ ಸಂಸ್ಕರಿಪುದೆಂದೊರೆದು || ೩೨ ||

ಬಳಿಕ ವಿವಿಧಸುಗಂಧಕಾಷ್ಠದೊ |
ಳಿಳೆಯ ಚಿಂತಾನಲವು ಧಗಧಗ |
ನೆಳರುತಿರೆ ರವಿವಾರದಪರಾಹ್ಣದೊಳಗದರಲ್ಲಿ ||
ತಿಲಕತನುವನ್ನುರಿಸಿದರು ಸುತ |
ತಿಲಕರಿಬ್ಬರು, ಗಾಂಧಿಯೊಡನಾ |
ಬಲುಬಲಾನ್ವಿತ ಶೌಕತಾಲಿಯು ಶೋಕತಾಳಿರಲು || ೩೩ ||

ತಿಲಕನಾ ದೇಹಾಸ್ಥಿಯನು ಗ |
ದ್ದಲದೆ ಪೂನೆಗೆತರಿಸಿ, ಪಾಲಕಿ |
ಯಲಿ ಮೆರೆಸಿಕೊಂಡಾಡಿದರು ನಿಜಪುತ್ರರೊಡಗೂಡಿ ||
ಹಲವರದನು ಪ್ರಯಾಗ ಗಂಗಾ |
ತಳಕೆ ತಂದದನಾಕೆಗರ್ಪಿಸಿ |
ಮುಳುಗೆ ನಾಕತರಂಗೆ ಶೋಕತರಂಗೆ ಯೆನಿಸಿದಳು || ೩೪ ||

ಭಾರತವಿಲಾಪ.

ಹಾ ತಿಲಕ! ಲೋಕಾಂತರವನೀ |
ನೇತಕೀ ಸಮಯದಲಿ ಸೇರಿದೆ |
ದಾತರಾರೈ ನಿನ್ನ ಸಹಜಾತರಿಗನಾಥರಿಗೆ ||
ಭೂತಲಸ್ವಾತಂತ್ರ್ಯಘಾತಕ |
ಭೂತಗಳ ಬಾಯಲ್ಲಿ ಬಿದ್ದತಿ |
ಯಾತನೆಯ ಪಡುವುದನು ನೋಡುತ ನಡೆದೆಯ ಕಟಕಟ || ೩೫ ||

ಊರವರ ಕಡೆಯಿಂದ ವಾಗ್ಗಂ |
ಭೀರವಿದ್ಯಾನಿಧಿವಖೀಲನೆ |
ಘೋರಘಾತಕದಾ **ದಯಾರಹಿತರ** ವಿಚಾರದಲಿ ||
ಊರೊಡೆಯ ಮಾಡಿರುವ ವಿಧಿಯನು |
ದೂರಿ ಜಗದೊಡೆಯನಲಿ ಮನವಿಯ |
ಸಾರಿಯವರ ವಿಚಾರತೀರಿಸಲತ್ತಲೈದಿದೆಯೊ || ೩೬ ||

1920
ಎಂದಗೋಸ್ತೊಂದನೆಯ ದಿನದೊಳ |
ಗೊಂದು ಹಿತನೆಲೆಯದು **ಖಿಲಾಪ** |
ತ್ಸಂಧಿ-ಯ ಖಿಲಾಪತ್ತು ಸಂಧಿ-ಯೊಳಾಗದುಳಿದಿಹುದೋ ||
ಅಂದಿನಿಂ ಪರರೆಡೆಯೊಳಿರುವುದು |
ಕುಂದೆನುತ ಸುಪ್ರಾಣ ಪದಕವ | 1-8-1920.
ಹೊಂದಿರದೆಯುದ ತೊರೆದೆ! ಪದಕವ ಗಾಂಧಿಯುಳಿದಂತೆ || ೩೭ ||

ತಿಲಕ ನೀನು ಸ್ವರಾಜ್ಯವೃಕ್ಷವ |
ಬೆಳೆಯಿಸುತ, ನಿಷ್ಕಾಮಕರ್ಮಿಗ |
ಳೊಳಗಿನಗ್ಗಳೆಯರಿಗೆ ನಿಜಪಂಥವನು ತೋರಿಸಲು ||
ಫಲಗೊಡುವ ಸಮಯದಲಿ ವೃಕ್ಷದ |
ಫಲಗಳನಪೇಕ್ಷಿಸದೆ ಲೋಕವ |
ತೊಲಗಿದೆಯೊ ಹಾ! ನಿನ್ನ ಮಾನವತನುವ ನಿಃಸ್ವಾರ್ಥಿ || ೩೮ ||

1918
ಎರಡು ವರ್ಷದ ಹಿಂದೆ ದೇಶವು |
ಜರಗಿಸಿದ ರಾಷ್ಟ್ರೀಯ ಸಭೆಗಾ |
ದರದಿ ನಿನ್ನಯ ಕೊರಳಿಗಧ್ಯಕ್ಷತೆಯುಹಾರವನು ||
ಹರುಷದಿಂದರ್ಪಿಸಿದರುಂ ಸ್ವೀ |
ಕರಿಸದಿಹ ನಿಃಸ್ವಾರ್ಥ ನೀನೆಂ |
ದಿರಲು ಜಗದಲಿ ತಿಲಕ ತಿಲ ಕಂಬನಿಯು ಬಯಸಿದೆಯೊ? || ೬೯ ||

ತಿಲಕ ಹೊರಟೇ ಹೋದೆ ಬಾಲಕ |
ತಿಲಕರಿಬ್ಬರನುಂ, ಶ್ರಿಪುತ್ರೀ |
ತಿಲಕೆಯರನುಂ, ಭರತಖಂಡದ ಬಂಧುಜನಗಳನು ||
ಇಳೆಯ ಸ್ವಾತಂತ್ರ್ಯದ ರಥದೆಡೆಯೊ |
ಳುಳಿದು ನಿಲ್ಲಿಸಿ ನಡೆದೆ ಹಾ! ಮುಂ |
ದೆಳೆವುದೆಂತು? ಸ್ವರಾಜ್ಯಹೃದಯನೆ! ಗೆಲುವುದನ್ನೆಂತೋ? || ೬೦ ||

ಹೇಳಿ ಫಲವೇನಕಟ ಕಾಲನ |
ಕಾಲದಲಿ ಕಡುಮಧ್ಯರಾತ್ರಿಯು |
ಕಾಲ ಕಗ್ಗತ್ತಲೆಯ ಕಾಲದೆ ಕಳ್ಳನಂದದಲಿ ||
ಆಳುಗಳನಳುವಾಳುಗಳ ಬಲ |
ದಾಳುಗಳ ಕಣ್ಮರಸಿ ಕದ್ದನು |
ಬಾಲಗಂಗಾಧರನೆ ಬಂಧನಕಂದು ಸೆಳೆದಂತೆ || ೬೧ ||

ಕೇಳು, ಹಿಂದೂದೇಶಮಾತೆಗೆ |
ಬಾಲಗಂಗಾಧರನೆ ನೀ ನಿಜ |
ಬಾಲನೆನಿಸುತ ನಡೆದೆ ಜನನಿಯು ಸೇವೆಯುನು ಮಾಡಿ ||
ಮೇಲೆ ನಮ್ಮಾ ತಾಯಿಗಾರ್ ಗತಿ |
ಹೇಳಲೈ ಸೌಭಾಗ್ಯದೇವಿಯು |
ಫಾಲತಿಲಕವೆ ತಿಲಕ ಪೋದಂತಾಯ್ತು ನಿನ್ನೊಡನೆ || ೬೨ ||

ಅನ್ನಪಾನವ ಬಿಟ್ಟು ಹಗಲಿರು ।
ಳೆನ್ನದೆಯೆ ಬಂದಿದ್ದಬಂಧನ ।
ಬನ್ನಗಳಗಣಿಸದೆಯೆ ನಿರತವು ತನುಮನೋಧನವ ॥
ತನ್ನ ದೇಶಕ್ಕಾಗಿ ನೀಡಿದ ।
ಪುಣ್ಯವಂತನೆ ಲೋಕಮಾನ್ಯನೆ ।
ಇನ್ನು ಕೇಳುವರಾರು? ಹೇಳುವರಾರು? ಗತಿಯಾರು? ॥ ೪೩ ॥

ಕೇಸರೀ ಪತ್ರಾಂಬುಜಾತ ವಿ ।
ಭೂಷಣನೆ, ಗೀತಾರಹಸ್ಯ ವಿ ।
ಶಾಸಕನೆ, ದೇಶದ ವಿರೋಧಿ ಮದಾಂಧ ಸಿಂಧುರಕೇ ॥
ಕೇಸರಿಯೆ, ದೇಶಾಭಿಮಾನಿ, ವಿ ।
ದೇಶನತನುತ, ಲೋಕಮಾನ್ಯ, ವಿ ।
ಶೇಷ ವಿಶ್ವಜ್ಞಾನಿ, ಭೂಸುರತಿಲಕವಂಶಮಣಿ ॥ ೪೪ ॥

ಗ್ರಂಥಕರ್ತರ, ತಾರ್ಕಿಕರ, ವೇ ।
ದಾಂತಿಗಳ, ವರವಾಗ್ಮಿಗಳ, ಪರ ।
ತಂತ್ರಮುಕ್ತರ ದೇಶಸೇವಾಸಕ್ತರಾದವರ ॥
ಪಂಕ್ತಿಯಲಿ ಮೇಲಾಗಿ ಸಂತತ ।
ನಿಂತಿರುವ ದೇಶಾಭಿಮಾನಿ ದಿ ।
ಗಂತನುತರಲಿ ತಿಲಕ ತಿಲಕಪ್ರಾಯನೀನಲ್ತೇ? ॥ ೪೫ ॥

ಮೆರೆವ ಹಿಂದೂದೇಶವಿರುವಾ ।
ವರೆಗೆ ಸ್ವಾತಂತ್ರ್ಯಾಭಿಲಾಷಿಗ ।
ಳಿರುವ ತನಕಾ ಸೂರ್ಯ ಚಂದ್ರರು ಸುಳಿವ ಪರ್ಯಂತ ॥
ಧರೆಯ ನೃಪರಲಿ, ರಾಜನೀತಿ ।
ಜ್ಞರಲಿ, ತತ್ವಜ್ಞರಲಿ, ವೇದ ।
ಜ್ಞರಲಿ, ದೈವಜ್ಞರೊಳಗಚ್ಯುತನಾಗಿ ನೀನಿರುವೆ ॥ ೪೬ ॥

ಎಲ್ಲಿ ಜನನವದೆಲ್ಲಿ ಮರಣವ |
ದೆಲ್ಲಿ ದಹನವದಾದೊಡಂ ಯೆ |
ಲ್ಲೆಲ್ಲಿಯುಂ ನೀನಿರ್ಪೆ ನಿಜ ನೀನಿಲ್ಲದೆಡೆಯಿಲ್ಲ ||
ಎಲ್ಲರಲ್ಲುಂ ನಿನ್ನ ಮಹಿಮೆಯು |
ಸೊಲ್ಲದಲ್ಲದೆ ಬೇರೆ ಸೊಲ್ಲುಗ |
ಳಿಲ್ಲವಾಗಿರೆ ದೇವನೇ ನೀನೆಂಬುದತಿಶಯವೆ? || ೪೭ ||

ಭೂವಲಯದಲಿ ರಾಮಕೃಷ್ಣರ |
ದೇವರೆಂದಾದಿಯಲಿ ನೆನೆದವ |
ನಾವ ಮಹಮದಬುದ್ಧರನು ದೇವಾಂಶರವರೆಂದು ||
ಆವನರಿತವ ಮೊದಲವರ ದೇ |
ಹಾವಸಾನದ ಮೇಲೆಯಲ್ಲದೆ |
ಭಾವಿಸಲು ಶ್ರೀತಿಲಕ ನೀನುಂ ದೇವನೇದಿಟದಿ || ೪೮ ||

ನಿನ್ನ ಹೆತ್ತಾ ಜನನಿ ಮಾನ್ಯಳು, |
ನಿನ್ನ ಹೊತ್ತಾ ಧರಣಿ ಧನ್ಯಳು, |
ನಿನ್ನ ಕರವನು ಪಿಡಿದ ಕಾಂತಾಮಣಿಯು ಮಾನಿತಳು, ||
ನಿನ್ನ ಕರೆಸಿದ ಸುರಪಸೇವ್ಯನು, |
ನಿನ್ನ ನಾಮವ ನೆನೆವ ಮನುಜನು |
ಪುಣ್ಯವಂತನು ಬಾಲಗಂಗಾಧರಮಹಾದೇವ || ೪೯ ||

ಅಂದು ರವಿಕುಲತಿಲಕ ಪುರಜನ |
ವೃಂದವನ್ನಗಲುತ್ತ ವನವನು |
ಹೊಂದಲಿಳೆಯಲಿ ಶೋಕತಮ ಪಸರಿಸಿದ ಪರಿಯಂತೆ ||
ಇಂದು ನರರವಿಕುಲತಿಲಕ ಜನ |
ವೃಂದದಲಿ ಮರೆಯಾದೆಯಾದುದ |
ರಿಂದ ಕಡುದುಃಖಾಂಧಕಾರವು ಕವಿದಿಹುದು ಜಗದಿ || ೫೦ ||

ಲೋಕಬಾಂಧವಮಿತ್ರನಿಲ್ಲದೆ ।
ಲೋಕ ಬೆಳಗುವುದುಂಟೆ? ನಮ್ಮಯ ।
ಲೋಕಭಾಂಧವಮಿತ್ರ ನೀನಿಲ್ಲದಿರೆ ಶೋಭಿಪುದೆ ॥
ಲೋಕತೇಜಃಪುಂಜ ಬಾರೈ ।
ಶೋಕತಿಮಿರವ ನೂಕು ಮುಳುಗಿದ ।
ಲೋಕಬಾಂಧವನುದಿಸ ಪುನರಪಿ ನಿಶೆಯು ನಿರಿವಂತೆ ॥ ೫೧ ॥

ಓಲಗದೆ ಸುರಲೋಕಮಾನ್ಯವಿ ।
ಶಾಲಸುಖಸಾಮ್ರಾಜ್ಯಸಂಪ ।
ಜ್ಜಾಲಮಧ್ಯದೆ ನಲಿದು ಬಾರೈ! ಬಂದು ಮೊಗದೋರೈ ॥
ಬಾಲಗಂಗಾಧರತಿಲಕ! ಜನ ।
ಲೋಲ ಶೃಂಗಾರದ ತಿಲಕ! ಘನ ।
ಶೀಲ ಬಂಗಾರದ ತಿಲಕ! ಬಾ ಲೋಕಮಣಿ ತಿಲಕ! ॥ ೫೨ ॥

ಅವನಿಯಲಿ ತ್ರಿಪುರಾರಿಲಕ್ಷ್ಮೀ ।
ಧವಕಮಲಸಂಭವರ ಶಕ್ತಿಯೊ ।
ಳವತರಿಸಿ ತಿಲಕಾಭಿಧಾನವನಾಂತು ಭಾರತಕೆ ॥
ಭವಿಸಿದಾಪಜ್ಜಾಲಗಳ ನೀ ।
ಗುವ ಸ್ವದೇಶೀವ್ರತದೊಳೇ ದೇ ।
ಹವ ಸಮರ್ಪಿಸಿದವಗೆ ಜಯ ಜಯ ಲೋಕಮಾನ್ಯನಿಗೆ ॥ ೫೩ ॥

(ಶ್ರೇಯಃಪ್ರಾರ್ಥನೆ.)

ತಿಲಕ ಮರೆಯಾಗಿರಲು ತಿಲಕದೆ ।
ಕಲೆತ ಗಂಧವು ತಿಲಕಮಹಿಮೆಯ ।
ತಿಳಿಸುವಂದದಿ ತಿಲಕಮತವನು ಗಾಂಧಿ ಮೆರೆಯಿಸಲಿ ॥

ತಿಲಕ ದೇಶದಿಗಂಗನಾಮಣಿ ।
ತಿಲಕ, ದಿನಮಣಿತಿಲಕ ಮರೆಯಾ ।
ಗಲು, ತಿಲಕ ಸಖತಿಲಕ ಗಾಂಧೀರಾಜ ರಾಜಿಸಲಿ ॥ ೫೪ ॥

ರಾಗದಿಂ ಗುಣತಿಲಕ ತಿಲಕವಿ ।
ಯೋಗದಿಂದಾನಿಂದು ದುಃಖೋ ।
ದ್ವೇಗಕಾಲದೆ ಕೂಗಿದೆನು ಕರ್ಣಾಟಕಾಧ್ಯರಿರಾ! ॥
ಬಾಗಿ ನಮಿಸಿರಿ ನಮ್ಮ ದೇಶ ।
ಕ್ಕಾಗಿ ಸ್ವಾರ್ಥತ್ಯಾಗಿತಿಲಕಗೆ, ।
ಬಾಗಿ ನಮಿಸಿ ಮಹಾತ್ಮಗಾಂಧಿಗೆ, ದೇಶಬಂಧುವಿಗೆ ॥ ೫೫ ॥

ಶಾಂತಿ ದೊರೆಯಲಿ ತಿಲಕನಾತ್ಮಕೆ!
ಶಾಂತಿಯಾಗಲಿ ದೇಶದಲಿ ಮಿಗೆ! ।
ಶಾಂತವಾಗಲಿ ಪರದಯಾರಹಿತರ ಮಹೋತ್ಪಾತ! ॥
ಶಾಂತಿಯಲಿ ಶೀಘ್ರದಲಿ ಸುಸ್ವಾ ।
ತಂತ್ರ್ಯಲಾಭದೊಳಾ ಸ್ವರಾಜ್ಯವ ।
ನಾಂತು ಭಾರತಮಾತೆ ಬೆಳಗಲಿ ದೇವಲಕ್ಷ್ಮೀಶ! ॥ ೫೬ ॥

ಲಕ್ಷ್ಮೀನಾರಾಯಣ.

ಧನ್ಯ ಲೋಕಮಾನ್ಯ ಧನ್ಯ!

(ಎಂತು ಪೊಳೆವದೀ ಮಂದಿರ । ಆಹಾ) ಎಂಬಂತೆ.

ಶ್ರೀ ಲೋಕಮಾನ್ಯ ಸುಖಂಕರ । ಧನ್ಯ ॥ ಪ ॥
ಭೂಲೋಲ ಬಾಲಗಂಗಾಧರ ॥ ಧನ್ಯ ॥ ಅ. ಪ. ॥

ದೇವ ! ಗಂಗಾಧರ । ಪಾರ್ವತೀಸುಕುಮಾರ ।
ದೇವ ಸೇನಾನೀಸಮಾನ ನೀ । ಧನ್ಯ ॥ ೧ ॥

ಸತ್ಯಭಾಮಾಕಾಂತ । ನಿತ್ಯ ಗೋಪಾಲಕ ।
ಗೀತಾರಹಸ್ಯ ವಿಕಾಸಕ ॥ ಧನ್ಯ ॥ ೨ ॥

ಭೂರಿ ಸಂಸ್ಥಾಕರ್ತ । ವಿಶ್ವ ವಿದ್ಯಾವಂತ ।
ಧೀರ ! ಮಹಾರಾಷ್ಟ್ರ ಕೇಸರೀ ॥ ಧನ್ಯ ॥ ೩ ॥

ಜನ್ಮಸ್ವಾತಂತ್ರ್ಯಾಭಿ । ಮಾನ್ಯ, ಬುಧಾಗ್ರಣಿ ।
ಪೂರ್ಣಸ್ವರಾಜ್ಯಾಭಿ ಮಾನಿ ನೀ ॥ ಧನ್ಯ ॥ ೪ ॥

ಬಾಲಗಂಗಾಧರ । ತಿಲಕದೇಶೋದ್ಧಾರ ।
ಶ್ರೀಲಾಲ, ಪಾಲ ಗಾಂಧೀಸಖ ॥ ಧನ್ಯ ॥ ೫ ॥

ದೇಶಸೇವಾಸಕ್ತ । ದೇಶಭಾಷಾ ಭಕ್ತ ।
ದೇಶ ಬಾಂಧವ ಭಾರತಾನತ ॥ ಧನ್ಯ ॥

ಲಕ್ಷ್ಮೀನಾರಾಯಣ.

ತಿಲಕ ಪಂಚಕ.

ಆಸೀತ್ ಪುಣ್ಯಪುರೇಮಹಾನ್ ದ್ವಿಜವರೋಗಂಗಾಧರಾಖ್ಯಃ ಸುಧೀ
ಸ್ತಸ್ಯಾಸೀತ್ಕಿಲ ಪಾರ್ವತೀತಿಸುಗುಣಾ ಪತ್ನೀಸತೀಸಮ್ಮತಾ ॥
ಸುಬ್ರಹ್ಮಣ್ಯ ಇವಾತ್ತಶಕ್ತಿರ ಭವದ್ಧೀರಸ್ತಯೋಃ ರಾತ್ಮಜಃ ।
ನಾಮ್ನಾಶ್ರೀತಿಲಕಃ ಪ್ರಪಂಚತಿಲಕಃ ಕರ್ತುಂಬುಧಾನಾಂಹಿತಂ ॥ ೧ ॥

ಶ್ರೀಮಾನ್ ವಿಷ್ಣುಪದಾಶ್ರಿತಸ್ಸ ತಿಲಕಸ್ತ್ವಸ್ಮಿನ್ ಪ್ರಕಾಶೋದಯಂ |
ಗೋಭಿಸ್ಸತ್ಸುಮನೋವಿಕಾಸಮನಿಶಂ ಕುರ್ವನ್ ತಮೋ ನಾಶಯನ್ |
ದುರ್ದೈವಾತ್ಖಲು ಲೋಕಬಾಂಧವ ಇವ ಕ್ಷಿಪ್ರಂತಿರೋಭೂದಹೋ |
ನೋವಿಸ್ಮೃಃ ಪುರುಷೋತ್ತಮಃ ತಮಪರಂ ಸಂಸ್ಥಾಪಯೇತ್ತಾದೃಶಂ ॥ ೨ ॥

ಹೃದಿಸ್ಥಿತೇಸ್ಮಾಂಭುವಿ ಲೋಕಮಾನ್ಯೋ |
ಗುಣೋತ್ತರೋ ಶ್ರೀ ತಿಲಕೋಜನಾನಾಂ ॥
ಸಮಾರ್ಗಮಿತ್ರಾಣಿ ವಿಹಾಯಸದ್ಯಃ |
ದಿವಂಗತೋ ಭೂದಿತಿ ತನ್ಮೃಷೈವ ॥ ೩ ॥

ಮನಸ್ತು ಶಾಸ್ತ್ರೇ ಪರಮಾಣುರೂಪಂ |
ವದಂತಿ ನೈಯಾಯಿಕ ಸಾರ್ವಭೌಮಾಃ ॥
ಧತ್ತೇಕಥಂತ್ವೇ ತದಮುಂ ಮಹಾಂತಂ |
ಹತಾವಯಂ ನ್ಯಾಯವಿಚಾರದಕ್ಷೈಃ ॥ ೪ ॥

ದಯಾನಿಧಿಃ ಶ್ರೀ ಕಮಲಾಪತಿಸ್ಸ್ವಯಂ |
ಸಂಸ್ಥಾಪ್ಯಕಂಚಿತ್ ಪುರುಷಂ ಹಿತಾದೃಶಂ ॥
ಪಿತೇವಸಂರಕ್ಷತಿ ವಿಶ್ವಮೇತತ್ |
ಸಂಪ್ರಾರ್ಥನಾತತ್ರಹಿ ಪಿಷ್ಟಪೇಷಣಂ ॥ ೫ ॥

ಚಿದಂಬರ ಶ್ರೀನಿವಾಸಾಚಾರ್ಯ.

ಶ್ರೀ ತಿಲಕಸ್ಮೃತಿ.

(ವಾರ್ಧಕ್ಯ).

ಎಲ್ಲಿ ಕರ್ತವ್ಯ ಮಾರ್ಗವ ಮಂಜು ಮುಸುಕಿಹುದೊ |
ಎಲ್ಲಿ ಕಾರ್ಯಾಸಕ್ತಿ ಕಾಮಹತವಾಗಿಹುದೊ |
ಎಲ್ಲಿ ವಿಬುಧಾಂತರಂಗಕೆ ಹಾನಿಯಾಗಿ ತಿಳಿವಿನ ದೀಪವಾರಿರುವುದೊ ॥

ಅಲ್ಲಿ ಶೋಭಿಸುತಿಹುದು **ಲೋಕಮಿತ್ರರ** ಧೈರ್ಯ ।
ಅಲ್ಲಿ ಕಂಗೊಳಿಸುವುದು **ಗಂಗಾಧರ** ಸ್ಥೈರ್ಯ ।
ಅಲ್ಲಿ ರಾಜಿಸುತಿಹುದು ವಿದ್ವತ್ಕುಲೇಂದುವಹ ತಿಲಕನಾಗಾಂಭೀರ್ಯವು ॥೧॥

ಮೂರುಲೋಕದ ಮುಂದೆ ಕರ್ತವ್ಯದಕ್ಷತೆಯ ।
ತೋರಿ ನಿಜಹೃದ್ಗತವ ಸಾರಿ ಜನಹಿತಕಾಗಿ ।
ಭೂರಿ ವಿಘ್ನಗಳಿಗೆದೆಯೊಡ್ಡಿ ಕೃತಸಂಕಲ್ಪವನು ಬಿಡದ ಕಡುಗಲಿಗಳು ॥
ಧಾರಿಣಿಯನುಳಿದು ಪರಲೋಕಕ್ಕೈದಿದರೂ ವಿ ।
ಚಾರಿಸಲು ಕಾರ್ಯಪಥದಾ ಕುರುಹು ಕರ್ತವ್ಯ ।
ಭೀರುಗಳನುತ್ತೇಜಿಸದೆ? ಲೋಕಮಾನ್ಯರಾ ಜೀವನವು ಸಾಮಾನ್ಯವೆ ? ॥೨॥

ಮನದಿ ಮಂಡಿಗೆಯಮೆಲ್ವರು ಕೆಲರು ಕನ್ನಡಿಯ ।
ಹಣದ ಗಂಟಿಗೆ ಬಾಯಿಬಿಟ್ಟು ಬೀಳ್ವರು ಕೆಲರು ।
ಮನಗೆಟ್ಟು ಸಂಕಟವ ಕಂಡೊಡನೆ ಕರಗಿಕಾಲ್ತೆಗೆದೋಡುವರು ಕೆಲವರು ॥
ಘನವಿಘ್ನಸಂಕುಲಗಳೆದುರೊಡ್ಡಿದರು ತಾನು ।
ವಿನುತ ಧೈರ್ಯವತಾಳಿ ಕಾರ್ಯಪಥದಿಂ ಕದಲ ।
ದನವರತ ಹಿಡಿದ ಛಲದಿಂದ ಬಲದಿಂದ ಕೆಲಸವಗೈವವನೆ ತಿಲಕನು ॥ ೩ ॥

ಹಿಡಿದ ಛಲವನು ಬಿಡದೆ ಕಡೆಗಾಣಿಸುವ ಧೈರ್ಯ ।
ಪಡೆದುದನು ಪರಹಿತಕೆ ತೆಗೆದೀಯುವೌದಾರ್ಯ ।
ನುಡಿದ ಮಾತನು ಮಿಗದೆ ಮಾನವನನೂನನಪ್ಪಂತೆ ರಕ್ಷಿಸುವ ಶೌರ್ಯ ॥
ಕೆಡುಕರನು ಕಲ್ಮನದಿ ಕಾಲ್ಗೆರಗಿಸುವ ವೀರ್ಯ ।
ಪಡಗರದಿ ಭಾವಿತರ ಭಾವಿಸುವ ಗಾಂಭಿರ್ಯ ।
ಪೊಡವಿಯೊಳು ಸರ್ವವಿದ್ವಜ್ಜನರ ಮಧ್ಯದಲಿ ಶ್ರೀತಿಲಕರಿಗೆ ಸಂದುದು ॥೪॥

ನವರತ್ನ ಸಂಕುಲಗಳಿರಲಿಜಠರದಲಿ ಮಾ ।
ನವರತ್ನ ಸಂಕುಲಗಳಿಲ್ಲದಿರೆ ವಸುಧೆ ಮಾ ।
ನವನು ಪಡೆಯುವಳೆ ಬಹುರತ್ನೆಯೆಂದನವರತ? ಮೆರೆವಳೆ ಅಮೂಲ್ಯೆ ಯೆಂದು ? ॥

ನವರತ್ನಗಳ ಪರೀಕ್ಷಿಪರುಂಟು ಗಣಿಸೆ ಪಲ ।
ನವರತ್ನಗಳ ಪರೀಕ್ಷಿಪರಾರು? ಸಂತತವು ।
ನವರಾಜ ವೈಭವದಿ ರಾಜಿಸುತ ಲೋಕಮಾನ್ಯರು ಪೂಜ್ಯರೆನಿಸದಿಹರೆ? ॥ ೫ ॥

ಆರಹಿತಕಾಗಿ ಮೆಯ್ಯುರಿದು ಹೋರಾಡಿದರು? ।
ಆರಹಿತಕಾಗಿ ಬಂಧನ ಕಷ್ಟಸಹಿಸಿದರು? ।
ಆರಹಿತಕಾಗಿಪರರುಪಹತಿಯನತುಳಸಂತುಷ್ಟಿಯಿಂದಲೆ ತಡೆದರು? ॥
ಧಾರಿಣಿಯೊಳಾತ್ಮಸುಖವನು ಬಿಟ್ಟು ದೇಶದು ।
ದ್ಧಾರವೆಸಗಲು ಬದ್ಧಕಂಕಣರು ತಾವಾದ ।
ರಾರಹಿತಕಾಗಿ? ವಸುಧೆಯೆ ಕುಟುಂಬವು ಮಹಾತ್ಮರಿಗೆನಲು ಸಂದೇಹವೆ? ॥ ೬ ॥

ದೇಶಕಾರ್ಯಾಂಗಣದಿ ಕಾರ್ಯಪಕ್ಷರ ಕುಣಿಸಿ ।
ಭಾಸುರಮಹಾಸೂತ್ರಧಾರರೆಂದೆನಿಸಿ ಪರ ।
ದಾಸರಾಗಿಹ ಭಾರತೀಯರಿಗೆ ಸ್ವಾತಂತ್ರ್ಯ ಸೌಭಾಗ್ಯಗಳನೀಯಲು ॥
ತೋಷದಲಿ ಹೊಡೆದಾಡಿ ಭರತಮಾತೆಯುಬ್ಬೈವ ।
ದೂಷಕರ ನಾಲಗೆಯು ಕಟ್ಟಲೀಸುವ ವಿಬುಧ ।
ಭೂಷಣರೊಳನವರತ ಸದ್ಗುಣ ಸಹಸ್ರವಿಪ್ಪುದು ಸಹಜವಲ್ತೆ ಜಗದಿ? ॥ ೭ ॥

ಆ ಸ್ವರಾಜ್ಯಕ್ಕಾಗಿ ಸರ್ವಸ್ವವನು ಕೊಡುವ ।
ದೇಶಕಾರ್ಯಕ್ಕಾಗಿ ನಿಜದೇಹವನು ಬಿಡುವ ।
ತೋಷದಿಂ ಹಿಡಿದ ಕೆಲಸವನು ಕೊನೆಗಾಣಿಸುವ ಪಾಠವನು ಕಲಿಸಿ ಜಗಕೆ ॥
ನಾಶವಿಲ್ಲದ ಯಶಶ್ರೀಯ ಸಂಪಾದಿಸಿ ವಿ ।
ಶೇಷಗಾಂಭೀರ್ಯದಿಂ ರಾಜಿಸಿದ ತಿಲಕರನ ।
ಶೇಷ ಭಯಭಕ್ತಿ ಭಾವನೆಗಳಿಂದಲಿ ಭಜಿಸಿ ಜನರು ಪುಣ್ಯವಗಳಿಸಿರಿ ॥ ೮ ॥

ಕಡಂಗೋಡ್ಲು ಶಂಕರ ಭಟ್.

ಜಾಗ್ರತೆ! ಜಾಗ್ರತೆ!!

(ಪರಿವರ್ಧಿನಿ ಷಟ್ಪದಿ)

ಜಡರುಹದಿಂದುದ್ಭವಿಸಿದ ಕಾರಣ |
ಜಡಮತಿ ನೀನೆಲೆ ಸರಸಿಜ ಸಂಭವ |
ಹುಡುಗಾಟಿಕೆಯಾಯಿತು ನಿನ್ನಯ ಇದುವರೆಗಿನ ಕೆಲಸಗಳು ||
ನುಡಿ ನೀನಾರೆಂದೆಂಬುದ ಬೇಗನೆ, |
ದೃಢಮತಿಯಾಗಿಹ ನಿಸ್ಸಹಕಾರಿಯೊ? |
ಪೊಡವಿಯೊಳಗೆ ಶಾಂತೋಗ್ರಗಳೆಂಬುವ ಪಕ್ಷಗಳೊಳಗಾರು? || ೧ ||

ಮಾಡಿದ ಕೆಲಸವ ಕೊನೆಗಾಣಿಸದೆಯೆ |
ಹೇಡಿಗಳಂದದಿ ಮಧ್ಯದಿ ಬಿಡುವುದು |
ಪಾಡೆನಿಸುವುದೇ,? ನೋಡಿದರಿಂತಿದು ಬಲುನಾಚಿಕೆಗೇಡು. ||
ಆಡುವರೆಲ್ಲರು ವಿಧಿಯೆನ್ನುತ, ಕೊಂ |
ಡಾಡುತ್ತಿರುವರು ನಿನ್ನನು ಲೋಕದಿ; |
ಆಡೆನ್ನಿದಿರಲಿ ನಿನ್ನಲ್ಲಿಹ ವಿಧಿಯಾವುದೆನುತ್ತೀಗ? || ೨ ||

ಲೋಕದಲಿರುತಿಹ ಸುಮತಿಗಳೆಲ್ಲವ |
ಏಕೀಕರಿಸುತ, ದೃಢ ನಿಶ್ಚಯದಾ |
ಪಾಕದಿ, ಬೆರಸುತ, ವಿದ್ಯೆಯೆನುವ ಕೋವೆಯ ಮಧ್ಯದಲಿಟ್ಟು, ||
ಲೋಕೋತ್ತರವಾಗಿಹ ತೇಜಸ್ಸಿನ |
ಶಾಕದಿ ಕರಗಿಸಿ, ತಿಲಕನೆನುವ ಸುವಿ |
ವೇಕದ ಮೂರ್ತಿಯನೊತ್ತಿದೆ ಪಾರ್ವತಿಯುದರದ ಅಚ್ಚಿನಲಿ. || ೩ ||

ಇವನು ಸುರಾಚಾರ್ಯಗೆ ಮಿಗಿಲಾದವ |
ನಿವನು ಸುರೇಶ್ವರನಿಂದಲಧಿಕನಹ |
ನಿವನು ದಿವಾಕರನಿಂದಲು ತೇಜೋಯುತನಾಗಿದ್ದವನು; ||

ಇವನಿಗೆ ಸರಿಸಮನಾಗಿಹ ಪುರುಷನು ।
ಭುವನದಲಿಲ್ಲವೆನುತ್ತಿರೆ ಲೋಕವು, ।
ಅವಸರದಿಂಪರ್ಧದಿಸೀ ಮಾಡಿದ ಅವಿವೇಕತೆಯೇನು? ॥ ೪ ॥

ಎಲ್ಲವ ಸೃಜಿಸಿದೆ ನೀನೆನ್ನುತನಾ ।
ವೆಲ್ಲ ಕೃತಜ್ಞರು; ಆದರೆ ಲೋಕವ ।
ಉಲ್ಲಾಸವ ಗೊಳಿಸುವ ಸ್ವಾತಂತ್ರ್ಯವ ಸೃಜಿಸಲರಿಯದಿರಲು; ॥
ಬಲ್ಲವನಾಗಿಹ ಬಲವಂತನು ಬಂ ।
ದಲ್ಲಿ ಸಹಾಯವ ನಿನಗೆಸಗುತ್ತಿರೆ ।
ಇಲ್ಲದ ಮಾತ್ಸರ್ಯವತಂದೊಡ್ಡಿದೆ, ತಿಳಿಗೇಡಿಗಳಂತೆ ॥ ೫ ॥

ಬ್ರಾಹ್ಮಣರಿಗೆ ಹಿರಿಯನು ನೀನೆನಿಸುತ ।
ನಮ್ಮೀ ತಿಲಕನನಿರಿಸದ ಕಾರಣ ।
ಬ್ರಹ್ಮದ್ವೇಷವ ಮಾಡುವುದೇ ಕರ್ತವ್ಯವು ನಮಗೆಂದು, ॥
ಬಮ್ಮನಂದಿದೆಲ್ಲವರೊಡಗೂಡುತ, ।
ಬ್ರಾಹ್ಮಣೇತರರ ಪಂಗಡವೆನಿಸುತ, ।
ನಮ್ಮ ಮೇಲೆ ಕಿಡಿಕಿಡಿಯಾಗುವರಿದು ನಿನ್ನಯ ಕಾರಣದಿ. ॥ ೬ ॥

ಭಾರತೀಯರಖಿಲರು ಒಂದೆಂಬು ವಿ ।
ಚಾರವು ಸಾಧುವೆನುತ್ತಿರಿದಲ್ಲರು ।
ಸೇರಿರುವೆವು ಮನದೊಳಗಿಹ ಭೇದಾಭೇದಗಳನು ಬಿಟ್ಟು. ॥
ಆವೇನೆಂದರು ಗಣಿಸದೆ ಭಾರತ ।
ವೀರರು ಒಗ್ಗಟ್ಟಾಗುತ ಹೆಣಗಲು ।
ಸಾರತರದ ಸ್ವಾತಂತ್ರ್ಯವು ಬಹುದೆನುತಲಿ ತಿಳಿದಿಹೆವೀಗ. ॥ ೭ ॥

ರಘು ರಾಮನು ಬಂದುದ ನೋಡುತಲಾ ।
ಭೃಗುರಾಮನು ಹಿಂಜರಿದಾತೆರದಲಿ ।
ಜಗದುದ್ಧಾರಕನಾದ ಮಹಾತ್ಮನ ಮುಂದೆ ತರುತ ಬಳಿಕ ॥

ಅಗಣಿತ ಕಾರ್ಯದಿ ಬಳಲಿದ ತಿಲಕಗೆ |
ಸಿಗಲಿ ವಿರಾಮವೆನುತ್ತಲಿ ಮನದಲಿ |
ಬಗೆದೀಪರಿಯನು ಮಾಡಿದೆನೆನ್ನುವ ಯುಕ್ತಿವಾದವಿರಲಿ. || ೮ ||

ನಿನ್ನಿಂದಾಗಿಯೆ ನಮ್ಮಲಿ ಜಗಳಗ |
ಳನ್ನು ಹೂಡುವರು ಬ್ರಾಹ್ಮಣೇತರರು |
ಇನ್ನಾದರು ಬಂದೆಮ್ಮಯ ಪಕ್ಷದಿ ನಿಂತು ಸ್ವರಾಜ್ಯವನು ||
ಬಿನ್ನಣದಿಂದಲಿತಹುದಿಲ್ಲೆಂದರೆ, |
ನಿನ್ನ ಕೂಡೆ ಇದೊ, ನಿಸ್ಸಹಕಾರವು! |
ಚೆನ್ನಾಗಿಯೆ ಯೋಚಿಸಿಕೋ! ಜಾಗ್ರತೆ, ಜಾಗ್ರತೆಯಿಂದಿಹುದು. || ೯ ||

 (ಶಂ. ಭ.)

ಲೋಕಮಾನ್ಯತೆ.

(ಭಾಮಿನಿ ಷಟ್ಪದಿ).

ಹಿಮಗಿರಿಯು ದೃಢಗಾತ್ರ; ಗಂಗಾ |
ಯಮುನೆಗಳ ಪುಣ್ಯ ಪ್ರವಾಹವೆ |
ಧಮನಿಗಳೊಳಿಹರಕ್ತ; ವಿಂಧ್ಯವೆನಡು ಬಿಗಿದ ದಟ್ಟಿ ||
ಅಮಮ! ಕಾಲ್ಗಳು ಪೂರ್ವದಲಿ ಪ |
ಶ್ಚಿಮದಿ ನೀಡಿಹ ಪರ್ವತಾವಳಿ; |
ಯಮನವಾರಾಂತಿಹುದು ಭಾರತ ಲೋಕಮಾನ್ಯತೆಯೂ || ೧ ||

ತನುವುಲೋಗರ ಸೇವೆಗೆನೆ; ನಿಜ |
ಧನವು ನಿರ್ಧನಿಗಳಿಗೆ; ತನ್ನಯ |
ಮನವು ಕರುಣಾಪನ್ನರನು ರಂಜಿಸಲು; ಜೀವನವೂ—||

ಅನವರತ ತಾಯ್ಗಳ ನೆನಹಿಗೆ; |
ಘನತೆರಕ್ಷಿಸೆ ಧರ್ಮಪಥವನು |
ಕನಸಿನೊಳಗಾದರೆಯು ಮರೆಯದು ಲೋಕಮಾನ್ಯತೆಯು || ೨ ||

ಭೇದವಿಲ್ಲದ ದೃಷ್ಟಿ; ಪರರ ವಿ |
ರೋಧವಿಲ್ಲದ ಸತ್ಯಸುಧಿ; ದಾ |
ಯಾದಿತನವಿರದಮಲ ಸೋದರಬುದ್ಧಿ; ಅನುಭೂತೀ ||
ಕಾಮವಾತ್ರರ ದೌಷ್ಟ್ಯವನು; ವಿಧಿ |
ಬಾಧೆಗುಂದಿಸಲರಿಯದಿಹ ಛಲ; |
ಸಾಧನೆಯೊಳಿದು ಕರ್ಮವೀರರ ಲೋಕಮಾನ್ಯತೆಯು || ೩ ||

ಕರಗಿಸಲು ಪುಟವೇರುವುದು; ತಾ |
ಕೊರಗಿಸಲು ಗಹಗಹಿಸಿ ನಗುವುದು; |
ಸೆರೆಯಿಡಲು ಸೆರೆಯೊಡೆದು ಮುಕ್ತಿಯದಾರಿ ತೋರುವುದು ||
ಮರಣದಲಿ ನಿರ್ವಾಣವಾಂತುದು; |
ಶರಣದಲಿ ದಿಗ್ವಿಜಯವಾಯಿತು; |
ಭರತಕುಲದುದ್ಧಾರಕಾರಕ ಲೋಕಮಾನ್ಯತೆಯು || ೪ ||

ತಿಲಕನಳಿದರೆ ಲೋಕಮಾನ್ಯತೆ |
ಅಳಿದಿಹುದೆ? ತಾ ವ್ಯಕ್ತಿಯಳಿಯಲು |
ಉಳಿಯಲಿಲ್ಲವೆ ಕರ್ಮಯೋಗರಹಸ್ಯಶಕ್ತಿಯುಮೂ ||
ಅಳಿದ ಕಾಯದ ಸಹಿತ ಮಾಯುವೆ? |
ಸುಳಿದಿಹುದು ತಾ ಪಂಚತತ್ವದಿ |
ಬೆಳಗಲರಿಯದೆ ನಿಖಿಲಭಾರತ ಬಾಲರಸುಸುಳೀ || ೫ ||

ಎಮ್. ಎನ್. ಕಾಮತ್.

ನವೀನ ಅವತಾರಗಳು.

ಶಾ॥ ವಿ॥ ಶ್ರೀ ಮದ್ವಿಷ್ಣು ದಶಾವತಾರಗಳನಾಂತಂ ಶಿಷ್ಟರಿಷ್ಟಕ್ಕೆ ನಿ।
ಷ್ಪೀಮಾತಿಂಗಪವಾದದಿಂ ದೊರೆದನಿಪ್ಪತ್ತೊಂದಪಾರಾಶ ರೀ॥
ಶ್ಯಾಮಾಂಗಂ ನರಗೆಂದಲೋಕದೊಳೆತನ್ನಂಶಂ ಮಹಾತ್ಮರ್ಕಳೆಂ।
ದೀಮಾಕಾಂತನಸೂಕ್ತಿಯೇ ದ್ದಿಟಮೆನುತ್ತಂ ನಂಬವೇಳ್ಕೀಗದಲ್ ॥ ೧ ॥

ಕಂ॥ ವೇದಾರ್ಥಂಗಳ ವಿವರಿಸೆ।
ವೇದವ್ಯಾಸಾವತಾರಿಯಾದಂತೀಗಳ್॥
ಶ್ರೀಧರ ತನ್ನಯ ಗೀತಾ।
ಬೋಧಾರ್ಥವನಿರವಿಸಲ್ಕೆ ತಿಲಕನುಮಾದಂ ॥ ೨ ॥

ಜಗದೊಳ್ ತೀವಲ್ ಪರ ಹಿಂ।
ಸೆಗಳಾಗಳೆಬುದ್ಧನಾಗಹಿಂಸೆಯನೊರೆದೊಲ್॥
ಬಗೆವೊಡೆಗಾಂಧ್ಯವತಾರದೊ।
ಳೊಗೆದುಂಗೋರಕ್ತಪಾತವಂ ಹರಿತಡೆದಂ ॥ ೩ ॥

ತಿಳಕಂ ಸ್ವರಾಜ್ಯಸಾಧನೆ।
ಯೊಳುಬನ್ನಂಬಟ್ಟುಗುರಿಯ ಮೊಳ್ದೋರಿಸಿದಂ॥
ಬೆಳೆಯಲ್ ನಿಸ್ಸಹಕಾರಂ।
ಕಳೆಗೊಬ್ಬರವಿಟ್ಟು ಗಾಂಧಿಯದಪರ್ಬಿಸಿದಂ ॥ ೪ ॥

ಇವರಿರ್ವರ್ ವಿಷ್ಣ್ವಂಶೋ।
ದ್ಭವರಪ್ಪರ್ ಧಿಟಮದಲ್ಲದಿರ್ದೊಡೆ ಕಿಂಚಿತ್॥
ಅವಸರದೆ ತಿಲಕಘಂಡಿಂ।
ತವಿಘ್ನದಿಂಗಳಿಸಲುಂಟೆ ಕೋಟಿಯಧನಮಂ ॥ ೫ ॥

ಚಂ॥ ತೊಡೆಯೊಳೆತಾಳ್ದು ಚಂದ್ರಮೃಗಮಂ ಮಲಿನಾಂಕನೆನಿಪ್ಪ ಸಿಂಹತಾ।
ನೆಡೆಬಿಡದಾ ಮೃಗಾವಳಿಯನುಗ್ರಸುತೀಕ್ಷ್ಣ ನಖಂಗಳಿಂದೆ ಸೀ ॥
ಳ್ದೊಡೆ ಮೃಗಯೂಥನಾಥನೆನಿಪಂ ಧರೆಗಿಂತಿದು ಚಿತ್ರಮುತ್ಕೃಮೊ ।
ನುಡಿವೊಲೆ ಲೋಕವಾಸ್ವಂಗರೆಂತವನೀಶರಿಳಾತಳಾಗ್ರದೊಳ್ ॥ ೩ ॥

ಕಂ॥ ಧರೆಯಾಳಲೇಕೆ ಗಂಗಾ ।
ಧರತಿಲಕನು ಮನಭಿಷಿಕ್ತ ನೃಪನಪ್ಪಂ ಭೂ ॥
ವರರಳಿದರೆನಿಬರವದಿರ ।
ವರಯಶವಿಂದಿರ್ಪುದೆ ತಿಲಕನುರುಬೆಳ್ಳಸದೊಳ್ ॥ ೭ ॥

ನಶ್ವರವಾದ ಶರೀರದ ।
ವಿಶ್ವಸನವುನುಳಿದು ಕೀರ್ತಿದೇಹಮನಿಡುತಂ ॥
ಶಾಶ್ವತಗತಿಯುಂ ಪೊಂದುವ ।
ರೀಶ್ವರ ಸದ್ಭಕ್ತರಳಿವರೆ ಪರೋಪಕೃತರ್ ॥ ೮ ॥

ತಿಲಕನವರಾತ್ಮಸುಗತಿಗೆ ।
ತಿಲಕನ ಸತ್ಕೀರ್ತಿಶಾಶ್ವತ ಪದಕೆನಲ್ಗೀ ॥
ತಿಲಕ ಸದೃಶರ್ಗೆಸಜ್ಜನ ।
ತಿಲಕರ್ಗೆ ವಿಜಯಮನೀಗನಿಶವುದನೀಶಂ ॥ ೯ ॥

ಪಿ. ಕೃಷ್ಣಯ್ಯ.

ರಾಷ್ಟ್ರೋದಯರಾಗ.

ನೋಡುನೋಡದೊನಿದ್ದಿಸಿದ ಪ್ರಾಚೀನತೆ ನಮ್ಮ ।
ನಾಡನು ಮುಸುಕುದೆರೆದು ನೋಡುವ ॥
ಪಾಡಿಂದಲಿಡಿದ ಕತ್ತಲೆಹರಿಯಲು ರಾಗ ।
ಗೂಡಿರುವಾರ್ಯರವದನವ ನೆತ್ತುತಲಿದೆ ॥ ೧ ॥

ನಿದ್ದೆಯೆಚ್ಚರಿಕೆ ಮುಂತಾದ ಜೋಡಿಗಳಿಳೆ ।
ಗಿದ್ದುದು ಸ್ವಪ್ನವೆಚ್ಚರದೊಳಗೆ ॥
ಹೊದ್ದಿದ ಸಂಸ್ಕೃತಿ ದೋಷವೀವರೆಗಿನ ।
ನಿದ್ದೆಯು ಕನವರಿಕೆಯೊಳು ಕಂಗೆಟ್ಟೆವು ॥ ೨ ॥

ವೇದಶಾಸ್ತ್ರಗಳ ಜಾಗ್ರತಿಯುಳಿದೊಳಗಿನ ।
ಭೇದದ ವೈಕಲ್ಯಕೊಳಗಾಗಲು ॥
ಆ ದುಷ್ಟ ಸಂಸ್ಕಾರವೇ ಕನಸಾಗಿಯೆ ।
ಖೇದವಿತ್ತುದು ನಮ್ಮ ಭ್ರಮೆಯುದು ನಿಜವಲ್ಲ ॥ ೩ ॥

ಆರು ತಿಂಗಳ ನಿದ್ದೆಯುವನಂತಿದಲ್ಲ ನೂ ।
ರಾರು ವರ್ಷಗಳಾಯ್ತು ಮೈಮರೆತು ॥
ಸೇರಿ ನರಳಿ ಹಾಸಿಗೆಯೊಳೆ ಹೊರಳುತಮು ।
ಲೇರಿದ ಮರುಳರ ತೋರಿಕೆಗಾದೆವು ॥ ೪ ॥

ಮಲಗಿದೆಡೆಗೆ ಶುದ್ಧ ಜೀವನವಾಯುಗ ।
ಳಲೆವುದು ಕಡಮೆಯಾದಂದದಲಿ ॥
ಹೊಳೆಯುವಾತ್ಮಾಭಿಮಾನಿಗಳುದ್ಭವವು ನ್ಯೂನ ।
ಗೊಳಲು ಮೈಕೃಶವಾಯ್ತು ತೊಲಗಿತು ಮೈಮೆಗಳ್ ॥ ೫ ॥

ಕತ್ತಲೆಯುಲಿ ಪರರಾಜತೆ ಕೈಬೀಸೆ ।
ಹತ್ತಿತು ರಕ್ತವಾರಿತು ಬೆಳ್ಪು ॥
ಸುತ್ತಿತಿರುಳ್ಗಣ್ಣರೇ ಕೆಲವರು ನಮ್ಮೊ ।
ಳುತ್ತಮರೆನಿಸಿ ಕಣ್ಮುಚ್ಚಿ ಪಾಲ್ಗುಡಿದರು ॥ ೬ ॥

ಇರುಳುಗಣ್ಣವರೊಡವೆರಸಿ ನಮ್ಮವರೆ ಕೆ ।
ಲರು ಹಗಲ್ನಾಡಿ ಸಂಸ್ಥಾನವನು ॥
ಮೆರೆಯಿಸಿದರು ವಿಧಿಬರೆದಿಹ ಬರಹಾ ।
ಒರಸಲಿಕರುಹಾರಿರುವರೆ ಹಾ ಹಾ ॥ ೭ ॥

ತಾಯಿಗೆ ಮಗು ಬೇಡದಿರಲಜ್ಜಿಗೇಕೆಂಬ |
ನ್ಯಾಯದೊಳೂರ ಕಣ್ಣಾರಿರಲು ||
ಆಯಿತು ಬಲವಂತರಾಯನುದ್ಭವ "ಭಾರ |
ತಾಯತ ಧರ್ಮೋದ್ಧಾರಾಯ"ವೆಂದರಿಯಿಸೆ || ೮ ||

ಎಳವೆಜೌವನ ಮುಪ್ಪ ಮಾತೃಭೂಮಿಯ ಪದ |
ತಳದೊಳರ್ಪಿಸಿ ಜ್ಞಾನ ಕರ್ಮಗಳೊಳ್ ||
ಬಳೆದ ಭೇದವನೀಗಿ ತಿಳಿವಿಗೆ ಕೆಲಸವೆ |
ಸಲುವ ವ್ಯಯಮಂದರಿಸಿದನೆತ್ತೆತ್ತಲು || ೯ ||

ಸ್ವಾತಂತ್ರ್ಯದೋರುತ ಸ್ವಾತಂತ್ರ್ಯಮೀಯುವ |
ಮಾತಿಲ್ಲದಂಗಡಿಗರ ಸನ್ನಿಗೆ ||
ನೀತಿಗಂಧದನಸ್ಯವಾಗಿ ಗಂಧಿಯು ಚಿತ್ರ |
ದಾತಳದಲಿ ನೆಲೆಗೊಂಡೌಷಧಾತ್ಮನು || ೧೦ ||

ಧರ್ಮದ ಬೀಜವ ಬಿತ್ತಿರೆನ್ನುತ ಮತ್ತೆ |
ಕರ್ಮದ ಮೊಳೆಮೊಳೆಯಲು ಚುಚ್ಚುವ ||
ನಮ್ಮ ಸಮಾಜ ವೃಕ್ಷವ ನೋಡಲೊಲ್ಲನ |
ದುರ್ಮತಿ ಕೀಟಕೂಟಕೆ ಮಾಟವೆನಿಸಿದೆ || ೧೧ ||

ಬಿಳಿಮೊಯ್ಯ ಜನರು ನಿನ್ನನು ಶಿಕ್ಷಿಸಿವರೇನು |
ತಳುವದೆ ತಮ್ಮ ಮತೋದ್ಧಾರಿಯ ||
ಹಿಳಿಯಲಿಲ್ಲವೆ? ಬಳಿಕವನನು ಪೊಗಳುವ |
ರೊಳಗಿನಮಣಿಯ ಬಿಸುಟು ಬೇಲಗೊಂಬರು || ೧೨ ||

ಪುಟ್ಟಿದ ಮನೆಗೆ ತಿಲಕನೆಳಮೆಯೊಳ್ಪ್ರಸಾ |
ಪಟ್ಟಣ ತಿಲಕನುಜೌವನದಿ ||
ಕಟ್ಟಕಡೆಗೆ ಭಾರತಕೆ ತಿಲಕನು ಶ್ರೀ |
ಕೃಷ್ಣನೆನಲು ವಿಶ್ವತಿಲಕನೆಂದೆನಿಸುವೆ || ೧೩ ||

ಅಸಹಕಾರದೊಳೀಗ ಮೆಯ್ಯಹಂಗನು ತೊರೆ ।
ದೆಸೆಯುಂ ವಸ್ವಾಭಿಮಾನದಿ ಸೆರೆಗೆ ॥
ಹೊಸ ಮದುವೆಯು ಕೈಯ್ಯ ಸೆರೆಗೆ ಕೈನೀಡುತಿ ।
ಪ್ಪ ಸಮಸಾಹಸಿಗಳಾತ್ಮನು ನೀನಲ್ಲವೆ ॥ ೧೪ ॥

ಕಾಯಾತ್ಮಭೇದವ ತೋರಿದ ತಿಲಕನು ।
ಸಾಯುಂವುದುಂಟೆ ಬರಿದೆ ಚಿಂತೆಯೂ ॥
ಮಾಯಾರಹಿತ ಸರ್ವೋದ್ಧಾರಕನದೊ ನಮ್ಮ ।
ಕಾಯುಂವಾಯರ್ಾತ್ಮದಿ ತಳತಳಿಸುತಲಿಹ ॥ ೧೫ ॥

ಎಮ್. ತಿಮ್ಮಪ್ಪಯ್ಯ, 'ಕಾವ್ಯಾರ್ಣವ.'

ಲೋಕಮಾನ್ಯೋಪದೇಶಃ

(ಭಾಮಿನಿ)

ನಮ್ಮ ಜನನಿಯುಂ ಬಡಿಸಿದನ್ನವೆ ।
ನಮ್ಮ ದೇಹದ ಸುಖಕೆ ಸಲುವುದು ।
ಸುಮ್ಮನಿತ್ತರು ಪರರುನಮಗದಯೋಗ್ಯವೆಂಬಂತೆ ॥
ನಮ್ಮ ದೇಶದಿ ನೆಯ್ದ ಬಟ್ಟೆಯೆ ।
ನಮ್ಮ ದೇಹಕೆ ಭೂಷಣವು ಮೇಣ್ ।
ನೆಮ್ಮದಿಯ ನಮಗಿತ್ತು ದೈನ್ಯವ ದೂರಮಾಡುವುದೂ ॥

(ವಾರ್ಧಿಕ್ಯ)

ಪರರೊಡವೆ ಬಯಸುವುದು ಪರಮಪಾತಕವೆಂಬ ।
ತೆರದಿ ಪರದೇಶಿ ವಸ್ತುಗಳ ಬಯಕೆಯ ಬೇಗ ।
ತೊರೆದು ಪರಮಾದರದಿ ತಿಲಕಸ್ವರಾಜ್ಯನಿಧಿಗೆರೆವುದೈ ಧನಧಾರೆಯಂ ॥
ತ್ವರಿತದಿಂ ಸ್ವಾತಂತ್ರ್ಯ ಸಾಧನೆಗೆ ಮೂಲವಹ ।
ಚರಕವನು ತಿರುಗಿಸುತ ನೂಲುವುದೆ ನಮಗೀಗ ।
ಪರಮಧರ್ಮವಿದೆಂದು ಗಾಂಧಿಗಳು ಸಾರುವರು ಕೇಳಿರೈ ಸಾಧುಜನರೇ ॥

ಸಂಸ್ಕೃತ ಶ್ಲೋಕ.

ಕಲಿದೋಷ ಜನ್ಯಜನತಾತಿ ದೀನ ತಾ ।
ದಲನಾಯ ತಂತುವಯನಂ ಪ್ರಚಾರಯನ್ ॥
ಕಲಯನ್ ವಿದೇಶವಣಿಜಾಂ ಸ್ಪೃದಿವ್ಯಥಾಂ ।
ತಿಲಕಸ್ವರಾಜ್ಯನಿಧಿರೇಷ ವರ್ಧತೇ ॥ ೧

ಶ್ರೇಯಃ ಪ್ರಾಪ್ತುಂ ಪರಣಿರನಘಾ ಲೋಕಸೇವೈವ ಸಾಧ್ವೀ ।
ತಸ್ಯಾಂ ಸಕ್ತಸ್ತ್ಯಜತು ಚತುರಸ್ತ್ವಾಂ ಪರಾಧೀನ ವೃತ್ತಿಂ ।
ಯುಕ್ತಂ ಯತ್ನಂ ರಚಯತಿ ಕುರುತಾಃ ಸತ್ಸ್ವರಾಜ್ಯಸ್ಯಸಿದ್ಧ್ಯೈ ।
ಧ್ಯೇಯಾದೇವಂ ತಿಲಕಗದಿತೋ ಲೋಕಮಾನ್ಯೋಪದೇಶಃ ॥ ೨

ಆಚಾರ್ಯ

ಪಾಂಚಾಲೆಯು ಗೋಳು.

(ಮಾತಿದ ಬಾರದೇನೋ) — ಎಂಬಂತೆ.

ಕಾಪಾಡು ದೀನ ಬಂಧೋ । ಸದ್ಗುಣ ಸಿಂಧೋ ॥ ಪ ॥
ಕಾಪುರುಷರು ಬಂದು । ತಾಪ ಬಡಿಪರಿಂದು ॥ ಅ ಪ ॥

ಮರೆಸಿ ಗುಂಡಿನ ಮಳೆ । ಸುರಿಸಿ ಬಾಲರ ಮೇಲೆ ।
ಬರಿದೆ ಹಲವರನ್ನು । ತರಿದೇ ಹಾಕಿದರಯ್ಯೋ ॥ ೧ ॥

ಕರುಣಾರಹಿತರಾಗಿ । ನಿರಪರಾಧಿಗಳನ್ನು ।
ಧರೆಯೊಳುರಗದಂತೆ । ಹರಿದಾಡಿಸಿದರಯ್ಯೋ ॥ ೨ ॥

ಭರದೆ ಬಹಳ ದೂರ । ತರುಣರ ನೋಡಿಸಿ ।
ನರಬೇಟೆಗಳ ಮಾಡಿ । ಕೊರಗಿಸಿದರು ಕೃಷ್ಣಾ ! ॥ ೩ ॥

ಮುಳಿದು ಮಕ್ಕಳನೊಯ್ದು । ಬಲುಚಿತ್ರವಧೆಗೈದು ।
ಬಲದೆ ಪಾಂಚಾಲೆಯು । ಬಳಲಿಸಿದರು ಕೃಷ್ಣಾ ! ॥ ೪ ॥

ಏಸು ದಿನದೊಳನ್ನ । ದಾಸಿಯಾಗಿರಲಿನ್ನು ।
ಶ್ರೀಶ ಸ್ವರಾಜ್ಯದ । ತೋಷವನೊದಗಿಸಿ ॥ ೫ ॥

ಲಕ್ಷ್ಮೀನಾರಾಯಣ.

ಮಹಾತ್ಮರಿಗೆ ಜಯವಾಗಲಿ!

(ದೇವೀ ಭುವನ ಮನಮೋಹಿನೀ) — ಎಂಬಂತೆ.

ಗಾಂಧೀ ಜಯತು ಕರುಣಾನಿಧಿಃ ॥ ಪ ॥
ಲೋಕಮನೋಹರ ಸನ್ಮೃತಗಂಧೀ । ಜಯತು ಸುಗುಣಶರಧೀ ॥ ಅಪ ॥

ಧರ್ಮದಂಡಧರ । ವೈರಿಭಯಂಕರ ।
ಆಫ್ರಿಕಹಿತಕರ । **ಚಂಪ**ಸುಖಂಕರ ।
ಖೇಡಜನೋದಧಿ ರಾಜಕಳಾಧರ ।
ಖೇದತಮೋಹರ ಭಾಸ್ಕರ ॥ ೧ ॥

ಜಯತು '**ಮಹಾತ್ಮ**' ಜಯತು ವಿಬುಧಮಣೀ ।
ಜಯತು ಭಾರತ ರಥಿಕಕುಲಾಗ್ರಣೀ ।
ಜಯತು ಸುಧಾರಕ ಧುರಜಯರಮಣೀ ।
ಲೋಲಭೀಷ್ಮ ಛಲಜಾಲಪಾಲಕ ॥ ೨ ॥

ಘನ'**ಸತ್ಯಾಗ್ರಹಿ**,' ಸಂತತಪಾಹೀ ।
'**ನಿಸ್ಸಹಕಾರೀ**' ಜನಸಹಕಾರೀ ।
ಗಾಧಿಜಸದೃಶಾ, ಕಡುಗಲಿಪುರುಷಾ ।
ಹಿಂದುಮುಸಲ್ಮಾನೈಕ್ಯಕಾರಕ ॥ ೩ ॥

ಆವಂ ಭಾರತಮಾತೆಯಂ ಪರರ ನಿರ್ಬಂಧಂಗಳಿಂ ಖಂಡಿಸು ।
ತ್ತೋವಲ್ 'ನಿಸ್ಸಹಕಾರ' ಖಡ್ಗಕರದಿಂ ಕಾದಾಡಿಕೊಂಡಿರ್ಪನೋ ।
ಆ ವಂದ್ಯಾತ್ಮ ಮಹಾತ್ಮ ಗಾಂಧಿಗತಿ ದೀರ್ಘಾಯುಷ್ಯಮಂ ನೀಡುಗಾ ।
ದೇವಂ ಕಾಲಭಯಂಕರಂ ಸುಖಕರಂ ಭದ್ರಂಕರಂ ಶಂಕರಂ ॥ ೧ ॥

(ಮೂರ್ತಿಮಂತ ಕೀರ್ತಿಯುಭೀ) — ಎಂಬಂತೆ.

ಶ್ರೀಮಹಾತ್ಮಗಾಂಧಿ ನಮೋ, । ಜಯತು ಭಾರತಾಗ್ರಣೀ ॥ ಪ ॥
ಭೂಮನೋಹರಾತ್ಮಗಂಧಿ । ಜಯತು ಹೇ ದಯಾನಿಧೀ ॥ ಅಪ ॥

ಚಂಪ, ಖೇಡ, ಆಫ್ರಿಕಾದಿ | ದೇಶ ವಂದ್ಯ ವೈಭವ |
ತಾಪ ತಮವಿನಾಶ ಮಿತ್ರ | ಜಯತು ಲೋಕಬಾಂಧವ || ೧ |

ಬಾಲ, ಪಾಲ, ಲಾಲ, ಘೋಷ | ದಾಸ, ಜಿನ್ನ, ಗೋಖಲೆ, |
ನಗಾಲವೀಯ, ನೆಹರುಸಖನೆ | ಜಯತು ಸತ್ಯಪಾಲನೆ || ೨ ||

ಮಹಮದೀಯ ಹಿಂದುನೇತ್ರ | ಅಸಹಕಾರ ಸಾರಥಿ |
ಮಹಮದಾಲಿ ಶೌಕತಾಲಿ | ಪ್ರಿಯನೆ ಸುಗುಣವಾರಿಧೀ || ೩ ||

ದೇಶಬಂಧು ಶೋಕಹರಣ | ಜಯತು ಲೋಕಮೋಹನ |
ದಾಸಕರಮಚಂದಗಾಂಧಿ | ಜಯತು ನಿತ್ಯಪಾವನ || ೪ ||

ಲಕ್ಷ್ಮೀನಾರಾಯಣ.

ದೇಶಬಂಧುವಿಗೆ ಜಯವಾಗಲಿ!

(ತಿಲಕರುಕಳೆ ಲಾಲಿಲೋಚನೆ) — ಎಂಬಂತೆ.

ಚಿತ್ತರಂಜನ | ಭಾರತೀಯರ | ಚಿತ್ತರಂಜನ || ಪ ||
ನಿತ್ಯಪಾವನ | ದೇಶಭೂಷಣ | ಕೃತ್ಯಧಾರಣ || ಅ ಪ ||

ತುಂಗವಿಕ್ರಮ | ಮಂಗಳಾಕರ | ವಂಗಪುಂಗವ |
ಸಂಗರೋತ್ಸವ | ವೈರಿಸಿಂಧುರ | ಸಿಂಗವೈಭವ || ೧ ||

ವೀರ 'ನಿಸ್ಸಹ | ಕಾರ' ಸುವ್ರತ | ಧಾರ | ಸುಂದರ ||
ಶೂರ ಧೀರ | ನಾಗ್ಗಂಭೀರ ! ಭಾರತಾದರ || ೨ ||

ಘೋಷವಮಾನಿತ | ಗಾಂಧಿಜೀಹಿತ | ದಾಸ ಪಾಲಿಸೈ |
ದೇಶಬಂಧು | ಚಿತ್ತರಂಜನ | ದಾಸರಾಜಿಸೈ || ೩ ||

ಲಕ್ಷ್ಮೀನಾರಾಯಣ.

ತಿಲಕಂಗೆ ಧನ್ಯವಾದ.

ಒಡಲುಳಿದುಂ ನಡೆದುಂ ನಾ |
ಲ್ಗಡಲಂ ಸಾರ್ದುಂ ನೆಗಳ್ತೆಕುಡಿಯಿಂ ಮೀರ್ದುಂ ||
ಪೊಡವಿಗೆ ತಿರುಳಂಬೊರೆದಾ |
ಬೆಡಗು ಚರಿತ್ರಂ ವಿಚಿತ್ರ ತಿಲಕಂ ಧನ್ಯಂ || ೧ ||

ಜಸಗಂಪಂ ತಿಳಿವೂವಂ |
ರಸವತ್ ಗೀತಾರಹಸ್ಯ ಪಣ್ಣಂ ಪೂರ್ಣಂ ||
ರಸೆಗಿತ್ತುಂ ಸ್ವರ್ಲೋಕದೊ |
ಳೆಸೆವಾ ಭಾರತಧರಣಿಯ ಕಂದಂ ಧನ್ಯಂ || ೨ ||

ಲೋಕದ ಮುಂದಿಂಗೆಳ್ವರ್ |
ನಾಕೆಂಬನಿತಿತ್ತು ತೆತ್ತು ತನುಮನಧನವಂ ||
ತೂಕಂ ಗೈದಿಹಪರಮುಂ |
ನಾಕಕಡದರ್ ತ್ರಿಲೋಕಮಾನ್ಯಂ ಧನ್ಯಂ || ೩ ||

ಮಾನ್ಯರಕುಲತಿಲಕಂ ರಾ |
ಜನ್ಯರ ಬಲವತ್ಕುಮಂತ್ರಶೋಧನ ತಿಲಕಂ ||
ಹೂಣ್ಯರ ಹೃದಯುದ ಮಧ್ಯದೆ |
ಗಣ್ಯಂ ತಾನಾಗಿನಿಂದ ತಿಲಕಂಧನ್ಯಂ || ೪ ||

ಲಲಿತ ಪದ ವೃತ್ತ.

ಭಾರತದ ಧಾರಿಣಿಗೆ ತೋರಿದನೆ ಜಾಗೃತಿಯುು |
ದಾರಗುಣನೇ ಮಹಿಮನೇ ತಿಲಕಧನ್ಯಂ ||
ಕಾರಣಿಕ ಲೋಕಸುಖಕಾರಕನೆ ಶೋಕಪರಿ |
ಹಾರಕನೆ ಮಾಮಹಿಮನೇ ತಿಲಕಧನ್ಯಂ ||

ಭೂರಿಹಿತಕಾರಿ ಮಮಕಾರಿಯುಪಕಾರಿ ಜಯ |
ನಾರಿನರನೇ ಮಹಿಮನೇ ತಿಲಕಧನ್ಯಂ |
ಸೂರಿಜನವಾಸ್ಯನವಿಚಾರಜನಕನ್ಯಸುರ |
ನಾರಿವರನೇ ಮಹಿಮನೇ ತಿಲಕಧನ್ಯಂ || ೧ ||

ಮುನ್ನೂರು ಶಿವರಾಮಯ್ಯ.

" ಶ್ರೀ ಭಗವತ್ಪ್ರೇರಣಾ 'ಓ' ಜಯತಿ "

ಮಹಾತ್ಮಾಗಾಂಧಿಗೀತಮ್.

ಜಯಜಯ ಗಾಂಧೇ | ಧೃತಿಮತಿ ಸಿಂಧೋ |
ಪೀಡಿತ ಭಾರತ— | ಭೂಜನ ಬಂಧೋ ||
ಜಯ ಸತ್ಯಾಗ್ರಹ— | ಸಿತ' ಮಹಾತ್ಮನ್ |
ಜಯ ದುರ್ನ್ಯಾಯಸಿ— | ವಾರಕ ಕರ್ಮನ್ || ಜಯಜಯ— || ೧ ||

ಜಯಜಯ ನಿರ್ಭಯ | ಪುಷ್ಕಲಕೀರ್ತೇ |
ಜಯ ಸ್ವದೇಶಾ— | ಯಾಪಿತ ಮೂರ್ತೇ ||
ಸುಖದುಃಖಾದಿ— | ದ್ವಂದ್ವಸಹಿಷ್ಣೋ |
ತತ್ರಾತ್ರ ಚ ಸ— | ರ್ವತ್ರ ಜಯಿಷ್ಣೋ || ಜಯಜಯ— || ೨ ||

ಆಫ್ರಿಕ ಖಂಡೇ | ಖಂಡಿತದುಃಖಃ |
ಖೇಡಾಜಿಲ್ಲೇ | ಮಂಡಿತ ಸೌಖ್ಯಃ ||
ಚಂಪಾರಣ್ಯೇ | ಕಂಪಿತಕಷ್ಟಃ |
ಸತತಂ ಜಯಜಯ | ಪುರುಷಶ್ರೇಷ್ಠ || ಜಯಜಯ— || ೩ ||

ಪಂಜಾಬ್ದೇಶೇ | ದೃಷ್ಟಾನರ್ಥ— |
ಶ್ಚರ್ಚಿತಡಾಯರೊ— | ಡಾಯರಕೃತ್ಯೈಃ ||
ತುರ್ಕಿಖಿಲಾಫತಿ | ವಿನಿಹಿತಚೇತಾ |
ಹಿಂದುಮುಸಲ್ಮಾ— | ನೈಕ್ಯವಿಧಾತಾ || ಜಯಜಯ— || ೪ ||

ಅಲ್ಲಾಹ್‌ಅಕ್ಬರ್ | ಶಂಕರ ಶಂಭೋ |
ಪಾಹಿ ಜನಾರ್ದನ | ಗಾಂಧಿಮಿಮಂ ಭೋಃ ||
ಜಯ ಗಾಂಧೇ ಜಯ | ಧೈರ್ಯದಯಾತ್ರಃ |
ಕುಮಾರಾಚಾರ್ಯ— | ಪ್ರೋಕ್ತಚರಿತ್ರಃ || ಜಯಜಯ— || ೫ ||

— ಕುಮಾರಾಚಾರ್ಯಃ.

ಭಾರತ ಪುತ್ರನ ಜೋಗುಳ.

ಜೋ ಜೋ ಜೋ ದೇವಕೀಕಂದ ಜೋ ಜೋ |
ಜೋ ಜೋ ಜೋ ಭಾರತಾನಂದ ಜೋ ಜೋ ||
ಜೋ ಜೋ ಜೋ ಧ್ರುವ! ಪ್ರಹ್ಲಾದ! ಜೋ ಜೋ |
ಜೋ ಜೋ ಜೋ ಭುವನಾಹ್ಲಾದ ಜೋ ಜೋ || ಜೋ ಜೋ || ೧ ||

ರಾಷ್ಟ್ರೀಯ ಸದ್ವಿದ್ಯೆಗಳನೆಲ್ಲ ಕಲಿತು |
ರಾಷ್ಟ್ರೀಯ ಸದ್ಧರ್ಮಕುಲಗಳನರಿತು ||
ರಾಷ್ಟ್ರಾಭಿವೃದ್ಧಿಯ ಮುಂದಾಗಿ ತಿಳಿದು |
ರಾಷ್ಟ್ರಸೇವಾಸಕ್ತನಾಗಿ ಬಾಳುವುದು || ಜೋ ಜೋ || || ೨ ||

ಬಾಳು ದಾದಾಭಾಯಿ, ಗೋಪಾಲರಂತೆ |
ಬಾಲಗಂಗಾಧರ, ಗಾಂಧಿಗಳಂತೆ ||
ಪಾಲ, ಲಾಲಾ ದಾಸ, ಘೋಷಾದ್ಯರಂತೆ |
ಬಾಳು ಭೀಮಾರ್ಜುನರಾಲಿಗಳಂತೆ || ಜೋ ಜೋ || || ೩ ||

ಶ್ರೀ ಲೋಕಮಾನ್ಯ ಮಹಾತ್ಮರ ಹಾಗೆ |
ಬಾಲಕ ತಿಲಕ ಸದ್ಗುಣಗಂಧಿಯಾಗೆ ||
ಮೂಲೋಕವಿಖ್ಯಾತನಾಗುವೆ ಕಂದ |
ಭೂಲೋಲ ಭಾಗ್ಯರತ್ನಾಕರ ಚಂದ || ಜೋ ಜೋ || || ೪ ||

ತುಂಗ ವಿಕ್ರಮ ರಾಮಮೂರುತಿಯಾಗು |
ಸಂಗೀತದಲಿ ಬಾಳಗಂಧರ್ವನಾಗು ||
ಪುಂಗವ ಚಿತ್ರಿಕ ರವಿವರ್ಮನಾಗು |
ವಂಗಕವೀಂದ್ರ ರವೀಂದ್ರನಂತಾಗು || ಜೋ ಜೋ || || ೩

ಭಾರತ ಗೌರವಧಾರಕ ಜೋ ಜೋ |
ಭಾರತ ವೀರಸುಧಾರಕ ಜೋ ಜೋ ||
ಭಾರತ ಮಿತ್ರ ಕುಲಾಗ್ರಣೀ ಜೋ ಜೋ |
ಭಾರತ ಪುತ್ರ ಶಿರೋಮಣಿ ಜೋ ಜೋ || ಜೋ ಜೋ || || ೬

ಜೋ ಜೋ ಜೋ ಆರ್ಯವಂಶ ಪ್ರದೀಪ |
ಜೋ ಜೋ ಜೋ ಬಾಲ ಸೂರ್ಯಪ್ರತಾಪ ||
ಜೋ ಜೋ ರಿಪುಗಜಕೇಸರೀದರ್ಪ |
ಜೋ ಜೋ ಪಸುಕಂದ ಕಂದರ್ಪ ರೂಪ || ಜೋ ಜೋ || || ೭ ||

ಜಯತು ಭಾರತ ಪಾವನೋತ್ಸವ ಜಯತು |
ಜಯತು ಭಾರತಸೇವ್ಯ ವೈಭವ ಜಯತು ||
ಜಯತು ಹಿಂದೂದೇಶ ಬಾಂಧವ ಜಯತು |
ಜಯತು ವಿಕ್ರಾಂತ ಕಂಠೀರವ ಜಯತು || ಜೋ ಜೋ || || ೮ ||

ಶೀಘ್ರ ಸ್ವರಾಜ್ಯ ಸಾಮ್ರಾಜ್ಯಾನುಭವಕೆ |
ಭಾಗಿಯಾಗುವ ಭಾರತೀಯನೆ ನಿನಗೆ ||
ದೀರ್ಘಾಯುರಾರೋಗ್ಯ ಸಂಪದವೀವ |
ಭಾಗ್ಯಲಕ್ಷ್ಮೀಶ ನಾರಾಯಣ ದೇವ || ಜೋ ಜೋ || || ೯ ||

ಲಕ್ಷ್ಮೀನಾರಾಯಣ.

ಸ್ವರಾಜ್ಯಾತ್ಮಕ್ಕೆ ತರ್ಪಣವು.

ಸಾಗಿತ್ತಿಂದಿಗೆ ವರ್ಷವೊಂದು ಸ್ವರಮಂ ಸೇರ್ದಾಸ್ವರಾಜ್ಯಾತ್ಮಕಂ ।
ನೀಗುತ್ತುರ್ವಿಗೆ ಲೋಕಮಾನ್ಯತೆಯನಾಂತಂ ದೇವಮಾನ್ಯಾಂಕಮಂ ॥
ಬಾಗುತ್ತಂ ಭಗವದ್ವಚಕ್ಕೆಸಗಿದಾ ನೈಷ್ಕರ್ಮ್ಯಧರ್ಮಕ್ಕೆ ತಾ ।
ನೇಗುತ್ತಾಗಿಹ ನನ್ನಿದೋ! ತಿಲಕನಂ ಮೂಬಾರಿಯಾಂತರ್ಪಿಪೆಂ ॥ ೧ ॥

ಮತ್ತೀಭಾರತದಾ ಸ್ವರಾಜ್ಯಸುಖವೆಂಬಾ ಸತ್ಫಲಕ್ಕಾಗಿಯೇ ।
ಸ್ವಾರ್ಥತ್ಯಾಗಮಹಾಧ್ವರಂನೆಗಳ್ದು ಯೂಪಸ್ತಂಭವನ್ನಿಲ್ಲಿಯೂ ॥
ರುತ್ತಂ ಬಂಧನದಿಂದದಕ್ಕೆ ಸಿಲೆಸ್ವಾತಂತ್ರ್ಯಧ್ವಜಂಗಟ್ಟಿದಾ ।
ಸತ್ಯಾಭಿನ್ನಶರೀರ ನನ್ನಿದೊ ಇದೋ ಮೂಬಾರಿಯಾಂತರ್ಪಿಪೆಂ ॥ ೨ ॥

ಆವಂಪೇಳಿದ ಮಾತಿನಕ್ಷರದಿ ರೇಖಾಮಾತ್ರಮಂ ಮಾಸಲಿ ।
ಲ್ಲಾವಂ ತನ್ನಡಿಯಂ ಸುರಾಜಪಥದಿಂ ಪಿಂದೊಯ್ದುದಿಲ್ಲೆಂದುಮಿಂ ।
ತಾವಂ 'ಧೀರ'ವಿಸರ್ಗತಕ್ಕನೆನಿಪಾಸ್ಯೆಪಿಂದಲೊಪ್ಪಿರ್ದನಾ ।
ನಾವಿದ್ವತ್ಕುಲವರ್ಯನನ್ನಿದೊ ಇದೋ ಮೂಬಾರಿಯಾಂತರ್ಪಿಪೆಂ ॥ ೩ ॥

ಕಲ್ಲಿಂ ಗಟ್ಟಿ ಸ್ವರಾಜ್ಯದಾರ್ಜನೆಯೊಳಕ್ಕುಂ ಚೇತಮಾವಂಗೆ ತ ।
ನ್ನಲ್ಲೊಂದಿರ್ಪರ ಕಷ್ಟದೊಳ್ ಮೆದುವದಕ್ಕುಂ ಪೂವನುಂಮೀರಿ ಇ ।
ನ್ನೆಲ್ಲಿರ್ಪರ್ ಪರಿಯೆನ್ನಲಾಂತನಧಿಕಂ ಲೋಕೋತ್ತರ ಶ್ರೀಯನೆಂ ।
ಬಲ್ಲೇನ್ನೆತಡೆಯಿಂದಿದೋತಿಲಕನಂ ಮೂಬಾರಿಯಾಂತರ್ಪಿಪೆಂ ॥ ೪ ॥

ತಾಂಕಣ್ಣಿಟ್ಟ ಸ್ವರಾಜ್ಯಪುಷ್ಪವಕಟಾಕೈಸಾರ್ದುದಿಲ್ಲಿನ್ನುಮೆಂ ।
ದೇಂ ಖೇದಂಗೊಳನೇ ಸ್ವರಾಜ್ಯಹೃದಯಂ? ಸಂತಪ್ತನಾಗಿರ್ಪನಿಂ ।
ನ್ನೇಂಕೇಳ್ವೆಂ ತಿಲಕಾತ್ಮತೃಪ್ತಿಗೆ ಜನಸ್ವಾತಂತ್ರ್ಯಮಾವಶ್ಯಕಂ ।
ನೀಂಕೈಗೂಡಿಸು ಶಂಕರಾ ಇದೊ ಇದೋಮೂಬಾರಿಯಾಂತರ್ಪಿಪೆಂ
॥ ೫ ॥

'ಕಾವ್ಯಾರ್ಣವ'

ಬಾಲಗಂಗಾಧರಸ್ತವದ ಪರಿಚಯು.

ಶ್ರೀಯುತ ಶ್ರೀಪತಿ ಭಟ್,

(ಅಧ್ಯಾಪಕ, ಮಹಾಜನ ಸಂಸ್ಕೃತ ಪಾಠಶಾಲಾ, ಪೆರಡಾಲ್ ಇವರ ಅಭಿಪ್ರಾಯು.)

(ಭಾಮಿನಿ.)

ದೇಶದೇಶದ ಜನರು ತಿಲಕಮ । ಹಾಶಯರ ಗಾಂಧಿಯರ ಸುಗುಣದ । ರಾಶಿಯ
ತಂತವ್ಮೊಳಗೆ ಕೊಂಡಾಡಿ ಮನದೊಳಗೆ ॥ ತೋಷಿಸುವರಲ್ಲದೆ ಪರಾರ್ಥವಿ ।
ಗುಣವನು ವರ್ಣಿಸಲು ಲ । ಕ್ಷ್ಮೀಶನಲ್ಲದೆ ಬೇರೆ ಕವಿಯಾರೀ ಮಹೀತಲದೀ ॥

ಲಲಿತಪದವಿನ್ಯಾಸದಲಿ ಮಂ । ಗಲದ ಸದ್ವರ್ತನದಿ ಯತಿಗಣ । ಗಳವಿಲಾ
ಮೋಹಿಸುವ ಸುಂದರದ ಸಿರಿಮೊಗದ ॥ ಲಲನೆ ರಸಿಕರ ಮನವನೊಲಿಸುತ । ಸೋ
ಸೋಲಿಪ ತೆರದಿ ಕವಿತಾ । ಲಲನೆ ಮೆರೆವಳದಾರ ಮುಖದಿಂದವನೆ ಕವಿರತುನ ॥

ಉತ್ತಮರ ಗುಣವರ್ಣನವು ಕವಿ । ತೋತ್ತಮಾಂಗನೆಗೆಸೆವ ಭೂಷಣ । ಚಿತ್ತಶ
ಯು ಕವಿಯೊಳಿರೆ ಕವಿತೆಗಿದು ಪರಿಶುದ್ಧೀ ॥ ಚಿತ್ರರಿಪುದೇನಿದನು ಜಗದೊಳು ।
ದಲಿ ಪುಟ್ಟಿದನು ಕವಿಕುಲ । ಸತ್ತಮನು ತಾನಾದನಾ ಶ್ರೀರಾಮಚರಿತದಲೀ ॥

ಲೋಕವನು ರಕ್ಷಿಸಲು ಜನಿಸಿ ದಿ । ವಾಕರಾನ್ವಯದೊಳಗೆ ಸುಜನಾ । ನೀಕವ
ಸಂತೈಸಿದನು ರಘುರಾಮ ಪೂರ್ವದಲಿ ॥ ಆ ಕಮಲಭವನಾಜ್ಞೆಯಲಿ ಜಗ । ದ
ವಂದ್ಯ ಮುನೀಂದ್ರನಾ ವಾ । ಲ್ಮೀಕಿ ವಿಸ್ತರಿಸಿದನು ರಾಮಾಯಣವನವನಿಯಲೀ ॥

ಆ ದಯಾನಿಧಿ ಬಳಿಕುದಿಸಿ ಗಂ । ಗಾಧರಾಹ್ವಯದಿಂದ ಕಲಿಯುವಿ । ಭೇದಕ
ತಾನಾಗಿ ಸಾರಿದನಾ ನಿಜಾಲಯವಾ ॥ ಆದಿಕವಿ ವಾಲ್ಮೀಕಿ ಮುನೀಂದ್ರನವನ ಗು । ಣೋದಯ
ವರ್ಣಿಸಲು ಶೋಭನ । ಭೂದಿವಿಜ ತಾನಾದ ಲಕ್ಷ್ಮೀನಾಥ ಸಂಜ್ಞೆಯಲೀ ॥

ಪರರ ಸುಖದುಃಖಂಗಳನು ದಿನ । ವರಿತು ತನ್ನದೆನುತ್ತ ಮಮತೆಯೊ । ಳಿರ
ಸದುಪಕಾರವನು ಸದ್ವರ್ತನದೊಳೆಸಗಿ ॥ ಪರಮ ಪುರುಷನ ಪಾದಪದ್ಮದ । ಸ್ಮರಣ
ಸಂಸಾರವನು ಸಂ । ತರಿಸುವನು ರಾಜಿಸಲಿ ಪೂರ್ಣ ಶತಾಯುರವನಿಯಲೀ ॥ ೬

ತಾ. 15—9—'21.

ಎಸ್. ಶ್ರೀಪತಿ ಭಟ್

ಪ್ರಕಟಣೆ.

ತಿಲಕಕಾವ್ಯಾಂಜಲಿ	೦—೪—೦.
ಮಹಾತ್ಮಾಗಾಂಧಿವಿಜಯ	೦—೨—೦.

ಟಪ್ಪಾಲುದ್ವಾರ ತರಿಸಿಕೊಳ್ಳುವವರು ಪುಸ್ತಕದ ಬೆಲೆಯಷ್ಟರ ಸ್ಟಾಂಪು ಚೀಟುಗಳನ್ನೂ, ಬುಕ್‌ಪೋಸ್ಟಿಗೆ ಅರ್ಧಾಣೆಯ ಚೀಟನ್ನೂ ಮುಂದಾಗಿ ಕಳುಹಿಸತಕ್ಕದ್ದು.

ಹೆಚ್ಚಿನ ಸಂಗತಿ ಕೆಳಗಣ ವಿಳಾಸದಾರರಿಂದ ತಿಳಿಯಬಹುದು.

ದೊರೆಯುವ ಸ್ಥಳ:—

ಪಿ. ಎಲ್. ಪುಣಿಂಚತ್ತಾಯ,
ಶ್ರೀಶೂಲೇಶ್ವರ, ಮಂಗಳೂರು.

ಅಥವಾ

ಎಸ್. ರಂಗಪ್ಪಯ್ಯ,
ರೋಯಲ್ ಪೆನ್ನಿ ಮಾರ್ಟ್,
ಮಿಶನ್ ಶಾಲೆಯ ಬಳಿ, ಮಂಗಳೂರು.

ಕೆ. ಎಮ್. ದಾಸಪ್ರಭು,
ರಥಬೀದಿ,
ಮಂಗಳೂರು.



ಶ್ರೀ ತಿಲಕರ ಸೌಭಾಗ್ಯವತಿ ಸತ್ಯಭಾಮಾಬಾಯಿಯವರು.